Swabhimani Sahakari

Pages : 24 / 20₹

# ಸ್ವಾಭಿಮಾನಿ ಸಹಕಾರಿ

Volume - 21
Issue - 05
May - 2024

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ



ಮೇ 10
ಬಸವ ಜಯಂತಿ/
ಅಕ್ಷಯ ತದಿಗೆ

ದಯವಿಲ್ಲದ ಧರ್ಮವಾವುದಯ್ಯ
ದಯವೇ ಬೇಕು ಸಕಲ ಪ್ರಾಣಿಗಳಲ್ಲಿಯೂ
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ



ಮೇ 23
ಬುದ್ಧ ಪೂರ್ಣಿಮಾ

ಧ್ಯಾನ ಹೆಚ್ಚಾದಂತೆ
ಜ್ಞಾನ ಹೆಚ್ಚಾಗುವುದು
ಜ್ಞಾನ ಹೆಚ್ಚಾದಂತೆ
ಮೌನ ಹೆಚ್ಚಾಗುವುದು

ಮೇ 1
ಕಾರ್ಮಿಕರ
ದಿನಾಚರಣೆ

ಮೇ 07
ಲೋಕಸಭಾ ಚುನಾವಣೆ



ಮರೆಯದೆ
ಮತ ಚಲಾಯಿಸಿ



ಮೇ 12
ಶಂಕರ ಜಯಂತಿ/
ರಾಮಾನುಜ ಜಯಂತಿ




ಜಲ ಸಂಜೀವಿನಿ

ನೀರನ್ನು ಮಿತವಾಗಿ ಬಳಸಿ, ಮುಂದಿನ ಪೀಳಿಗೆಗೆ ಜಲ ಮೂಲಗಳನ್ನು ಉಳಿಸಿ....

ಸೌಹಾರ್ದ ಸಹಕಾರಿಗಳ
ಸಂಖ್ಯೆ : 6257

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1635



ಜಿ. ನಂಜನಗೌಡ

ಆತ್ಮೀಯ ಸಹಕಾರಿ ಬಂಧುಗಳಿಗೆ ಸಪ್ರೇಮ ನಮಸ್ಕಾರಗಳು. ಈ ಮಾಹೆಯಲ್ಲಿ ಬರುವ ಶ್ರೀ ಬಸವ ಜಯಂತಿ, ಅಕ್ಷಯ ತೃತಿಯ, ಶ್ರೀ ರಾಮಾನುಜಾಚಾರ್ಯ ಜಯಂತಿ, ಶ್ರೀ ಶಂಕರಾಚಾರ್ಯ ಜಯಂತಿ ಹಾಗೂ ಬುದ್ಧಪೂರ್ಣಿಮಾದಂತಹ ವಿಶೇಷ ದಿನಗಳ ಪ್ರಯುಕ್ತ ಎಲ್ಲರಿಗೂ ಹಾರ್ದಿಕ ಶುಭಾಶಯಗಳು.

# ಶಿಕ್ಷಣ, ತರಬೇತಿ ಹಾಗೂ ಪ್ರಚಾರಗಳಿಗೆ ಆದ್ಯತೆ ಅಗತ್ಯ.

ಆತ್ಮೀಯ ಸಹಕಾರಿ ಬಂಧುಗಳಿಗೆ ಸಪ್ರೇಮ ನಮಸ್ಕಾರಗಳು. ಈ ಮಾಹೆಯಲ್ಲಿ ಬರುವ ಶ್ರೀ ಬಸವ ಜಯಂತಿ, ಅಕ್ಷಯ ತೃತಿಯ, ಶ್ರೀ ರಾಮಾನುಜಾಚಾರ್ಯ ಜಯಂತಿ, ಶ್ರೀ ಶಂಕರಾಚಾರ್ಯ ಜಯಂತಿ ಹಾಗೂ ಬುದ್ಧ ಪೂರ್ಣಿಮಾದಂತಹ ವಿಶೇಷ ದಿನಗಳ ಪ್ರಯುಕ್ತ ಎಲ್ಲರಿಗೂ ಹಾರ್ದಿಕ ಶುಭಾಶಯಗಳು. ಸಹಕಾರ ಕ್ಷೇತ್ರಕ್ಕೆ 120 ವರ್ಷಗಳ ಇತಿಹಾಸ. ನಮ್ಮ ದೇಶದ ಸಹಕಾರಿ ಚಳುವಳಿ ಅತ್ಯಂತ ದೊಡ್ಡದು. 31 ಕೋಟಿ ಸದಸ್ಯರ ಬಳಗ, 8 ಲಕ್ಷ ವಿವಿಧ ರೀತಿಯ ಸಹಕಾರ ಸಂಸ್ಥೆಗಳು ದೇಶದ ಅರ್ಥ ವ್ಯವಸ್ಥೆಯಲ್ಲಿ ಮಹತ್ವದ ಕೊಡುಗೆ, ಶೇಕಡಾ 97 ರಷ್ಟು ಹಳ್ಳಿಗಳ ವ್ಯಾಪ್ತಿ, ಹಲವು ವಿಶಿಷ್ಠ ಹಾಗೂ ಉತ್ತಮ ರೀತಿಯ ಸಹಕಾರಿ ಸಂಸ್ಥೆಗಳ ಕಾರ್ಯಾಚರಣೆಯಿಂದ ವಿಶ್ವವ್ಯಾಪಿ ಮನ್ನಣೆ ಪಡೆದಿರುವ ಈ ಸಹಕಾರಿ ಕ್ಷೇತ್ರ ಜನರ ಜೀವನ ಪದ್ಧತಿಯಾಗಿದೆ ಎಂಬ ವಿಚಾರವನ್ನು ತಮ್ಮಲ್ಲಿ ಹಂಚಿಕೊಳ್ಳಲು ಸಂತೋಷವಾಗುತ್ತದೆ. ರಾಷ್ಟ್ರೀಯ ಮಟ್ಟದಲ್ಲಿ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಈ ಕ್ಷೇತ್ರದ ಕಾರ್ಯನಿರ್ವಹಿಸುವಿಕೆ ಬಗ್ಗೆ, ಸಾಧನೆಗಳ ಹಾಗೂ ಅಗತ್ಯತೆಯ ಬಗ್ಗೆ ಉತ್ತಮ ಪ್ರತಿಕ್ರಿಯೆ ಇದೆ. ವಿಶ್ವ ಸಂಸ್ಥೆ (ಯುಎನ್‌ಓ) ಮತ್ತು ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು (ಐ.ಸಿ.ಎ.) ಈ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಶಿಕ್ಷಣ, ತರಬೇತಿ ಹಾಗೂ ಪ್ರಚಾರ ಕಾರ್ಯಗಳಿಗೆ ಹೆಚ್ಚಿನ ಮಹತ್ವ ಕೊಡುವ ಅಗತ್ಯತೆಯನ್ನು ಒತ್ತಿ ಹೇಳಿದ್ದಾರೆ. ಇದು ಸತ್ಯವೂ ಕೂಡ.

ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಸಹಕಾರ ಶಿಕ್ಷಣ ಒಂದು ರೀತಿಯ ಅಂದೋಲನದಂತೆ ನಡೆಯಬೇಕಿದೆ. ಕರ್ನಾಟಕದ 6242 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ 66 ಲಕ್ಷಕ್ಕೂ ಹೆಚ್ಚಿನ ಸದಸ್ಯ–ರಿಗೆ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಈ ಬಗ್ಗೆ ಶಿಕ್ಷಣ ನೀಡುವ ಅಂದೋಲನ ನಡೆಯುತ್ತಿದೆ. 1 ಲಕ್ಷಕ್ಕೂ ಹೆಚ್ಚು ಸಿಬ್ಬಂದಿಯನ್ನು ಹೊಂದಿರುವ ಈ ಕ್ಷೇತ್ರದಲ್ಲಿ ನಿರಂತರ ತರಬೇತಿ ಕಾರ್ಯಕ್ರಮಗಳು ನಡೆಯುತ್ತಿವೆ. ಇದು ಸಾಲದು. ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಸೌಹಾರ್ದ ಸಹಕಾರಿಗಳು ನಿರ್ವಹಿಸುವ ಅಗತ್ಯ ಇದೆ. ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ಸಂಯುಕ್ತ ಸಹಕಾರಿ ಹಲವಾರು ವಿಧವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಸಂಯುಕ್ತ ಸಹಕಾರಿಯ ಜೊತೆಗಾಗಲಿ ಅಥವಾ ಪ್ರತ್ಯೇಕವಾಗಿಯಾಗಲಿ ಸೌಹಾರ್ದ ಸಹಕಾರಿಗಳು ತಾವೇ ಸ್ವಯಂ ತಮ್ಮ ಸದಸ್ಯರಿಗೆ ಶಿಕ್ಷಣವನ್ನು ಹಾಗೂ ಸಿಬ್ಬಂದಿಯವರಿಗೆ ತರಬೇತಿಯನ್ನು ಹಮ್ಮಿಕೊಳ್ಳಬಹುದಾಗಿದೆ. ಇದಕ್ಕೆ ಅಗತ್ಯ ನೆರವನ್ನು ಸಂಯುಕ್ತ ಸಹಕಾರಿಯು ಒದಗಿಸುತ್ತದೆ.

ಇದು ಪ್ರಚಾರ ಯುಗ. ಬೃಹತ್ ಜನಸಂಖ್ಯೆಯನ್ನು ಹೊಂದಿರುವ ದೇಶ ನಮ್ಮದು. ಸೌಹಾರ್ದ ಸಹಕಾರಿಗಳು ತಮ್ಮ ಕಾರ್ಯಚಟುವಟಿಕೆಗಳ ಬಗ್ಗೆ ಹೆಚ್ಚು ಪ್ರಚಾರ ಮಾಡುವ ಮೂಲಕ ನಮ್ಮ ಅಸ್ತಿತ್ವದ ಬಗ್ಗೆ ಸಾರ್ವಜನಿಕರೊಂದಿಗೆ ಗುರುತಿಸಿಕೊಳ್ಳದಿದ್ದಲ್ಲಿ ಖಾಸಗಿಯವರ ಪೈಪೋಟಿಯನ್ನು ಎದುರಿಸಲು ವಿಫಲರಾಗುತ್ತೇವೆ. ಆದ್ದರಿಂದ ಪ್ರತಿಯೊಂದು ಸೌಹಾರ್ದ ಸಹಕಾರಿಗಳು ತಮ್ಮ ಕಾರ್ಯಚಟುವಟಿಕೆಗಳ ಹಾಗೂ ಸಾಧನೆಗಳ ಬಗ್ಗೆ ತಮ್ಮ ವ್ಯಾಪ್ತಿಯಲ್ಲಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಉತ್ತಮ. ಸಹಕಾರಿಯ ಸಾಧನೆಗಳ ಬಗ್ಗೆ ಕಚೇರಿಗಳಲ್ಲಿ ಪ್ರಚಾರ ಫಲಕಗಳನ್ನು ಉಪಯೋಗಿಸುವುದರ ಮೂಲಕ ಸೌಹಾರ್ದ ಸಹಕಾರಿಯ ಬಗ್ಗೆ ಸಾರ್ವಜನಿಕರಲ್ಲಿ ವಿಶ್ವಾಸಾರ್ಹತೆ ಹೆಚ್ಚಿಸುವ ಬಗ್ಗೆ ಕ್ರಮವಿಡುವ ಅಗತ್ಯತೆಯನ್ನು ಸೌಹಾರ್ದ ಸಹಕಾರಿಗಳು ತಿಳಿದು ಅದರಂತೆ ಕ್ರಮವಿಡುವಿರಾಗಿ ಆಶಿಸುತ್ತೇನೆ. ಎಲ್ಲರಿಗೂ ಶುಭವಾಗಲಿ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .......... 05–08
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .......... 09–11
**ಲೇಖನಗಳು :**
ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಯಡಿ ಆರ್ಥಿಕ, ವ್ಯವಹಾರಿಕ ಮತ್ತು ಆಡಳಿತಾತ್ಮಕ ವಿಷಯದಲ್ಲಿ ಮಧ್ಯಪ್ರವೇಶ ಮಾಡಬಹುದೇ ಮತ್ತು ಕಲಂ.70ರಡಿ ಇದಕ್ಕೆ ಅವಕಾಶವಿದೆಯೇ? .......... 12–13
ದಿನದ 8 ಗಂಟೆ ಮಾತ್ರ ಕೆಲಸ ಎಂದು ಮುನ್ನುಡಿ ನೀಡಿದ ದಿನ ಮೇ–1 "ಕಾರ್ಮಿಕರ ದಿನಾಚರಣೆ" .......... 14
ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಸಮಿತಿಗಳು, ಆಯೋಗಗಳು ಹಾಗೂ ಮುಂದಿನ ದಾರಿ ಭಾಗ – 03 .......... 22–24

# ಸಂಪಾದಕೀಯ

## ಯುವಕರನ್ನು ಸಹಕಾರ ಕ್ಷೇತ್ರದಲ್ಲಿ ತೊಡಗಿಸಲು ಕ್ಯಾಂಪಸ್ ಕೋ–ಆಪರೇಟಿವ್ ಸೊಸಾಯಿಟಿಗಳನ್ನು ಹೆಚ್ಚಿಸುವುದಕ್ಕೆ ಕ್ರೀಯಾಯೋಜನೆ ಅಗತ್ಯ.

ಸಹಕಾರ ಕ್ಷೇತ್ರ ಆರ್ಥಿಕ ಅಭಿವೃದ್ಧಿಗೆ ಅತ್ಯಂತ ಪ್ರಬಲ ಅಸ್ತ್ರವಾಗಿದೆ ಎಂಬುದರ ಬಗ್ಗೆ ಎರಡು ಮಾತಿಲ್ಲ. ಸಹಕಾರ ಕ್ಷೇತ್ರದ ಪ್ರಸಕ್ತ ಕಾರ್ಯಚಟುವಟಿಕೆಗಳು, ಸಾಧನೆಗಳು ಮೆಚ್ಚಿಕೊಳ್ಳುವ ಹಾಗಿವೆ. ಆದರೆ ಯುವಕರು ಈ ಕ್ಷೇತ್ರದಲ್ಲಿ ನಿರೀಕ್ಷಿಸಿದ ಮಟ್ಟದಲ್ಲಿ ಬರುತ್ತಿಲ್ಲ ಎಂಬ ಕೊರಗು ಇದೆ. ಈ ಕೊರಗು ನಿವಾರಣೆಯಾಗಿ ಬಹುಪಾಲು ಯುವಕರು ಈ ಕ್ಷೇತ್ರದ ಬಗ್ಗೆ ಆಕರ್ಷಿತರಾಗಿ ಈ ಕ್ಷೇತ್ರವನ್ನು ಉಪಯೋಗಿಸಿಕೊಳ್ಳುವಂತಾಗುವುದು ಅವಶ್ಯಕ.

ಈ ನಿಟ್ಟಿನಲ್ಲಿ ವಿಶ್ವ ಸಹಕಾರ ಮತ್ತು ಆರ್ಥಿಕ ಸಂಸ್ಥೆಯು 500 ಕ್ಯಾಂಪಸ್ ಸಹಕಾರ ಸಂಘಗಳನ್ನು ವಿಶ್ವವಿದ್ಯಾಲಯಗಳಲ್ಲಿ ಪ್ರಾರಂಭಿಸಿ ಯುವಕರನ್ನು ಈ ಕ್ಷೇತ್ರದ ವ್ಯಾಪ್ತಿಗೆ ಒಳಪಡಿಸುವ ಗುರಿ ಹೊಂದಿದೆ. ರಾಷ್ಟ್ರೀಯ ಸಹಕಾರಿ ಯೂನಿಯನ್, ವಿಶ್ವ ಸಹಕಾರ ಮತ್ತು ಆರ್ಥಿಕ ಸಂಸ್ಥೆ ಮತ್ತು ಗ್ರಾಮೀಣ ಸ್ವಯಂ ಸೇವಾ ಸಂಸ್ಥೆಗಳ ಮಹಾಮಂಡಳ ಎಲ್ಲವೂ ಸೇರಿ ದೇಶದ ವಿಶ್ವ ವಿದ್ಯಾಲಯಗಳಲ್ಲಿ ಕ್ಯಾಂಪಸ್ ಸಹಕಾರ ಸಂಘಗಳನ್ನು ಪ್ರಾರಂಭಿಸುವ ಯೋಜನೆಯನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಹಾಗೂ ಸ್ವಾಗತಾರ್ಹ.

ಈ ಅವಕಾಶವನ್ನು ಸಂಯುಕ್ತ ಸಹಕಾರಿ ಹಾಗೂ ಸೌಹಾರ್ದ ಸಹಕಾರಿಗಳು ಉಪಯೋಗಿಸಿಕೊಂಡು ರಾಜ್ಯದಾದ್ಯಂತ ವಿಶ್ವವಿದ್ಯಾಲಯಗಳಲ್ಲಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಹಕಾರ ಸಂಘಗಳನ್ನು ಪ್ರಾರಂಭಿಸಲು ಸಾಧ್ಯವಿದೆ. ಯುವಕರು ಹೆಚ್ಚಾಗಿ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರೆ ಈ ಕ್ಷೇತ್ರದ ಚಿತ್ರಣವೇ ಬದಲಾಗುವ ಸಾಧ್ಯತೆ ಇದೆ. ಯುವಕರಿಗೆ ಪ್ರಜಾಸತ್ತಾತ್ಮಕ ಆಡಳಿತದ ಅನುಭವ, ವ್ಯಾಪಾರಾಭಿವೃದ್ಧಿಗೊಳಿಸುವ ಚಾಕಚಕ್ಯತೆ, ಸಹಕಾರ ತತ್ವಗಳ ಪರಿಚಯ, ಸಹಕಾರ ಕ್ಷೇತ್ರ ಇದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತದೆ ಎಂಬ ಬಗ್ಗೆ ಅರಿವು. ಯುವಕರಿಗೆ ಹೆಚ್ಚಿನ ಉದ್ಯೋಗ ಅವಕಾಶಗಳನ್ನು ಹೇಗೆ ಕಲ್ಪಿಸಬಹುದು ಎಂಬ ಬಗ್ಗೆ ತಿಳುವಳಿಕೆ, ಮೇಲಾಗಿ ಸಹಬಾಳ್ವೆ, ಆಂತರಿಕ ಸಂಬಂಧಗಳ ನಿರ್ವಹಣೆಗೆ ಅವಕಾಶ, ಆಡಳಿತದ ಅನುಭವ, ವೃತ್ತಿಪರತೆಯ ಅಭಿವೃದ್ಧಿ ಹಾಗೂ ಆಡಳಿತದಲ್ಲಿ ಪಾರದರ್ಶಕತೆಯ ಮಹತ್ವಗಳ ಅರಿವಾಗಿ ಯುವಕರು ಉತ್ತಮ ಪ್ರಜೆಗಳಾಗಲು ಉತ್ತಮ ವೇದಿಕೆಯ ನಿರ್ಮಾಣವಾಗುತ್ತದೆ.

ರಾಜ್ಯದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಎಲ್ಲ ವಿಭಾಗೀಯ ಮಟ್ಟದಲ್ಲಿ ಜಿಲ್ಲಾಮಟ್ಟದಲ್ಲಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳಲ್ಲಿ ಹಾಗೂ ವಿಶ್ವ ವಿದ್ಯಾಲಯಗಳಲ್ಲಿ ಕ್ಯಾಂಪಸ್ ಸೌಹಾರ್ದ ಸಹಕಾರಿ ಸಂಘಗಳನ್ನು ಪ್ರಾರಂಭಿಸುವ ಮೂಲಕ ಯುವಕರನ್ನು ಈ ಕ್ಷೇತ್ರಕ್ಕೆ ಕರೆತರುವ ಈ ಯೋಜನೆಯ ಪಾಲುದಾರರಾಗಲು ಸಾಧ್ಯವಿದೆ. ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಂಡು ಈ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರಾಗಬಹುದಾಗಿದೆ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಶ್ರದ್ಧೆ"

ಬದುಕಿನಲ್ಲಿ ಮನದ ಪಾತ್ರ ಬಹಳ ದೊಡ್ಡದು. ಬದುಕು ಸಾರ್ಥಕವಾಗುವುದು. ವಿಕಾಸಗೊಳ್ಳುವುದು ಮನಸ್ಸಿನ ಸಿರಿವಂತಿಕೆಯಿಂದ ಈ ಸಿರಿವಂತಿಕೆ ಬರುವುದು ಯಾವುದರಿಂದ? ಮನಸ್ಸು ಎನ್ನುವುದು ಒಂದು ಅಂಗಳ. ಅದು ಸ್ವಚ್ಛವಿರಬೇಕು. ಅಲ್ಲಿ ಕಸ ಬಂದು ಬೀಳುತ್ತಿರುತ್ತದೆ. ದಿನವೂ ಅದನ್ನು ತೆಗೆದು ಹಾಕಬೇಕು. ಮನಸ್ಸಿನ ಕಸ ಯಾವುದೆಂದರೆ ಎಲ್ಲೆಲ್ಲಿ ಕಣ್ಣು ಹರಿಯುತ್ತದೆಯೋ ಅಲ್ಲಿ ದೋಷಗಳನ್ನು ಹುಡುಕಿದರೆ ಅದು ಕಸ ಹುಡುಕಿದಂತೆ. ಅದನ್ನು 'ಛಿದ್ರಾನ್ವೇಷನೆ' ಎನ್ನಬಹುದು. ಒಳ್ಳೆಯದಿದ್ದರೂ ಅದರಲ್ಲಿ ದೋಷಗಳನ್ನು ಹುಡುಕುವುದೇ ಛಿದ್ರಾನ್ವೇಷನೆ. ಪರದೋಷಗಳನ್ನು ಹುಡುಕುವುದು ಮನಸ್ಸನ್ನು ವಿಕಾರಗೊಳಿಸುತ್ತದೆ.

ಜಗತ್ತಿನಲ್ಲಿ ಬೇಕಾದಷ್ಟು ಒಳ್ಳೆಯದಿದೆ. ಪ್ರತಿಯೊಂದು ವಸ್ತು, ವ್ಯಕ್ತಿಗಳಲ್ಲಿ ಒಳ್ಳೆಯದಿರುತ್ತದೆ. ಕಸದಲ್ಲಿ ರಸವಿರುತ್ತದೆ. ಯಾವುದೂ ಪೂರ್ಣ ಕೆಟ್ಟದ್ದಿರುವುದಿಲ್ಲ. ಅದರಲ್ಲಿ ಒಳ್ಳೆಯದು ಅಡಗಿರುತ್ತದೆ. ಒಂದು ಕೋಳಿ ತಿಪ್ಪೆಯನ್ನು ಕೆದರುತ್ತಿರುತ್ತದೆ. ಅದನ್ನು ಕಂಡು ಒಬ್ಬ ಮನುಷ್ಯ. "ಅದನ್ನೇಕೆ ಕೆದರುತ್ತೀ? ಅಲ್ಲಿ ಏನು ಸಿಗುತ್ತದೆ?" ಎಂದ. ಆಗ ಕೋಳಿ ಹೇಳಿತು. "ಅದು ನಮಗೆ ಮಾತ್ರ ಸಿಗುತ್ತದೆ. ನಿಮ್ಮಂತಹ ಮನುಷ್ಯರಿಗೆ ಸಿಗುವುದಿಲ್ಲ. ಅದರಲ್ಲಿ ಏನಿದೆ ಎಂಬುದು ನಮಗೆ ಗೊತ್ತು". ಕೋಳಿ ಕೆದರುತ್ತ ಹೊದಂತೆ ಅದಕ್ಕೆ ಕಾಳು ಸಿಕ್ಕಿತು. "ನಿಮಗೆ ಇದು ನಿರುಪಯುಕ್ತ. ಆದರೆ ಇದೇ ನಮ್ಮ ಆಹಾರ, ಹುಡುಕುವ ಗುಣವಿದ್ದರೆ ತಿಪ್ಪೆಯಲ್ಲಿಯೂ ಒಳ್ಳೆಯದು ಕಾಣುತ್ತದೆ. ಇಲ್ಲದಿದ್ದರೆ ಒಳ್ಳೆಯದೂ ಕೂಡಾ ತಿಪ್ಪೆಯೇ!" ಎಂದಿತು.

ಕಸ ಕೂಡಿಸುತ್ತಾ ಹೋದರೆ ಹೊಲಸು ವಾಸನೆ ಆರಂಭವಾಗುತ್ತದೆ. ಆ ಕಸವನ್ನು ಭೂಮಿಯಲ್ಲಿ ಹರಡಿದರೆ ಅದು ಗೊಬ್ಬರವಾಗಿ ಭೂಮಿ ಫಲವತ್ತಾಗುತ್ತದೆ. ಮನುಷ್ಯ ಬರೀ ದೋಷಗಳನ್ನು ಹುಡುಕುವುದರಿಂದ ಉಪಯೋಇಲ್ಲ. ಚಂದ್ರನಲ್ಲೂ ಕಲೆಯುಂಟು ಆದರೆ ಅದರ ಬೆಳದಿಂಗಳು ಸ್ವಚ್ಛ, ತಂಪು, ದೃಷ್ಟಿಕೋನವನ್ನು ಅದು ಅವಲಂಬಿಸಿದೆ. ಬರೀ ದೋಷಗಳನ್ನು ಕಾಣುವುದಕ್ಕಿಂತ ಅದರ ಮಧ್ಯ ಗುಣಗಳನ್ನು ಹುಡುಕುವುದನ್ನು ಕಲಿಯಬೇಕು. ಆಗ ಮನಸ್ಸು ವಿಶಾಲವಾಗುತ್ತದೆ.

ಮನಸ್ಸಿನಲ್ಲಿ ಶ್ರದ್ಧೆ, ವಿಶ್ವಾಸಗಳಿರಬೇಕು. ಎಲ್ಲವನ್ನೂ ಅವಿಶ್ವಾಸದಿಂದ ಕಂಡರೆ ಹೇಗೆ? ಸಂತಸಪಡುವುದು ಯಾವಾಗ? ಎಲ್ಲವನ್ನೂ ಅವಿಶ್ವಾಸದಿಂದ ಕಂಡರೆ ಜೀವನ ಹದಗೆಟ್ಟು ಹೋಗುತ್ತದೆ. ಪರಸ್ಪರರಲ್ಲಿ ವಿಶ್ವಾಸವಿದ್ದಾಗ ಜೀವನ ಸುಂದರವಾಗುತ್ತದೆ. ಎಲ್ಲಿ ಶ್ರದ್ಧೆ ಇದೆಯೊ ಅಲ್ಲಿ ಶಾಂತಿ ಇದೆ. ಬಲ್ಲವರು ಹೇಳಿದ್ದರಲ್ಲಿ ವಿಶ್ವಾಸವಿರಬೇಕು. ಪ್ರತಿಯೊಂದರಲ್ಲಿ ಸಂದೇಹಪಟ್ಟರೆ ಜೀವನ ರೂಪಗೊಳ್ಳುವುದು ಹೇಗೆ?

ಮನಸ್ಸು ಮಂಗ ಇದ್ದ ಹಾಗೆ, ಅದು ಸಂಶಯ ಪಡುತ್ತಲೇ ಇರುತ್ತದೆ. ಸುಂದರ ಶ್ರದ್ಧಾ ಭಾವನೆ ಮನುಷ್ಯನ ಜೀವನವನ್ನು ಸುಂದರಗೊಳಿಸುತ್ತದೆ. ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಇಲ್ಲಿಗೆ ಬಂದರು. ಆಗ ಇಲ್ಲಿ ಮೂವತ್ತು ಕೋಟಿ ಜನರಿದ್ದರು. ಬಹುತೇಕರು ಅನಕ್ಷರಸ್ಥರು. ಇಂತಹ ಜನರನ್ನು ಎಬ್ಬಿಸಲು ಪ್ರಯತ್ನಿಸಿದರು. ಆದರೆ ಅವರಲ್ಲಿ ಸಂದೇಹವಿತ್ತು. ಇಂತಹ ಅಜ್ಞಾನ ತುಂಬಿ ತುಳುಕುವ ದೇಶದಲ್ಲಿ, ಕಡು ಬಡತನ ಇರುವಲ್ಲಿ ಜನಜಾಗೃತಿ ಎಂತಹದು? ಆದರೂ ಗಾಂಧೀಜಿ ತಮ್ಮ ಪ್ರಯತ್ನ ಆರಂಭಿಸಿದರು. ದೇಶಪ್ರೇಮವನ್ನು ಎಲ್ಲೆಡೆ ಹರಡಿದರು. ಇಡೀ ಭಾರತ ಅವರಲ್ಲಿ ವಿಶ್ವಾಸ ತೋರಿತು. "ಜಗತ್ತನ್ನು ಆಳುವ ಬ್ರಿಟಿಷರನ್ನು ನೀವು ಅದು ಹೇಗೆ ಓಡಿಸುತ್ತೀರಿ?" ಎಂದು ಕೆಲವರು ಕುಹಕ ಆಡಿದರು. ಆದರೆ ಭಾರತೀಯರಿಗೆ ಗಾಂಧೀಜಿ ಮೇಲೆ ವಿಶ್ವಾಸವಿತ್ತು.

ಒಂದು ಇರುವೆ ಗಿಡವನ್ನು ಏರುತ್ತಿತ್ತು. ಗಾಳಿ ಬಂದು ಆ ಇರುವೆ ಕೆಳಗೆ ಬಿದ್ದಿತ್ತು. ಮತ್ತೆ ಏರಹತ್ತಿತು. ಮತ್ತೇ ಬಿದ್ದಿತು. ಇದನ್ನು ನೋಡುತ್ತ ಕುಳಿತಿದ್ದ ಒಬ್ಬ ಸಂತ. "ಏಕೆ ಇಷ್ಟೆಲ್ಲ ಕಷ್ಟಪಡುತ್ತೀಯ? ಎಂದ. "ಆ ಗಿಡದ ತುದಿಯಲ್ಲಿ ಹಣ್ಣು ಇದೆ. ಅದನ್ನು ತಿನ್ನಬೇಕಾಗಿದೆ. ಎಷ್ಟು ಸಲ ಬಿದ್ದರೇನು? ನಾನು ಅದನ್ನು ತಿನ್ನುತ್ತೇನೆ. ಅಷ್ಟು ಸುಲಭವಾಗಿ ನಾನು ಸೋಲನ್ನು ಒಪ್ಪುವುದಿಲ್ಲ" ಎಂದು ಇರುವೆ ಹೇಳಿತು. ನಮಗೆ ನಮ್ಮ ಮೇಲೆ ವಿಶ್ವಾಸವಿರಬೇಕು. ನಮ್ಮ ಕೈ, ಕಾಲು, ಕಣ್ಣು ಮನಸ್ಸುಗಳ ಮೇಲೆ ವಿಶ್ವಾಸವಿರಬೇಕು. ಆತ್ಮವಿಶ್ವಾಸವಿದ್ದರೆ ಮನುಷ್ಯ ಬಹಳ ದಿನ ಬದುಕುತ್ತಾನೆ. ವಿಶ್ವಾಸ ಕಳೆದುಕೊಂಡರೆ ಅವನು ದುರ್ಬಲನಾಗುತ್ತಾನೆ. ಜೀವನವನ್ನು ಸುಂದರವಾಗಿ ಕಟ್ಟಿಕೊಳ್ಳಲು ಶ್ರದ್ಧೆ ಬೇಕಾಗುತ್ತದೆ. ಅದೇ ವಿಶ್ವಾಸ ಮನೆ–ಮನೆ, ಸಮಾಜ–ಸಮಾಜ, ದೇಶ–ದೇಶಗಳ ಮಧ್ಯ ಇರಬೇಕು. ಬರೀ ಸಂದೇಹ ಇರಬಾರದು. ಸಂದೇಹ ಕಡಿಮೆ ಆದಂತೆ ಮನಸ್ಸು ವಿಶಾಲವಾಗುತ್ತದೆ. ದೇವರಲ್ಲಿ, ಸಂತರಲ್ಲಿ ಎಲ್ಲದರಲ್ಲೂ ಶ್ರದ್ಧೆಯಿರದ ಮನಸ್ಸು ದುರ್ಬಲವಾಗುತ್ತದೆ. ಎಲ್ಲಿಯವರೆಗೆ ಶ್ರದ್ಧೆಯಲ್ಲಿವೋ ಅಲ್ಲಿಯವರೆಗೆ ಪರಮಶಾಂತಿ ಸಾಧ್ಯವಿಲ್ಲ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 34,414 ಆಗಿರುತ್ತದೆ. ಇವುಗಳ ಪೈಕಿ 25,952 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 8,462.

**ಏಪ್ರಿಲ್ ತಿಂಗಳ ಪ್ರಕರಣಗಳು :** ದಾವಾ ಪ್ರಕರಣ 186 ಇತ್ಯರ್ಥಗೊಂಡ ಪ್ರಕರಣಗಳು 1,344

**ಅಮಲ್ಜಾರಿ ಪ್ರಕರಣಗಳು :** ಒಟ್ಟು 9,086 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,657 ಪ್ರಕರಣಗಳು ಇತ್ಯರ್ಥಗೊಂಡಿದ್ದು. 7,429 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಏಪ್ರಿಲ್ ತಿಂಗಳಿನಲ್ಲಿ ಒಟ್ಟು 221 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

# ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ 2 ದಿನಗಳ ಕೌಶಲ್ಯ ಅಭಿವೃದ್ಧಿ ತರಬೇತಿ



ಉದ್ಘಾಟನೆ




ಸಮಾರೋಪ ಕಾರ್ಯಕ್ರಮ

**ಬೆಂಗಳೂರು** : ದಿನಾಂಕ 27.04.2024 ರಂದು ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ ಆಯೋಜಿಸಲಾಗಿರುವ ಕೌಶಲ್ಯ ಅಭಿವೃದ್ಧಿ ತರಬೇತಿಯ ಉದ್ಘಾಟನೆಯನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಸಿ.ಎ ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡುರಾವ್ ರವರು ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿಕಟ ಪೂರ್ವ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ರವರು ಆಗಮಿಸಿ ಉದ್ಘಾಟನೆ ಕಾರ್ಯಕ್ರಮವನ್ನು ಯಶಸ್ವಿಯಾಗಿಸಿರುತ್ತಾರೆ. ಅಲ್ಲದೆ ತರಬೇತಿಯ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ನಡೆಸಿಕೊಟ್ಟರು. ಸ್ವಾಗತವನ್ನು ತರಬೇತಿ ವಿಭಾಗದ ಹಿರಿಯ ಅಧಿಕಾರಿಯಾದ ಶ್ರೀ ಶಿವಕುಮಾರ ಬಿರಾದಾರರವರು ಕೋರಿದರು. ಪ್ರಾರ್ಥನೆಯನ್ನು ಶ್ರೀಮತಿ ವಿಜಯಶ್ರೀ ಯವರು, ಮಾಡಿದರು.

### ನಮ್ಮ ಕೆಲಸಕ್ಕೆ ನಾವು ಗೌರವ ನೀಡಬೇಕು ಅಗತ್ಯ – ಶ್ರೀ ನಂಜನಗೌಡ ಜಿ.

ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗಾಗಿ ಪ್ರತಿವರ್ಷ 2 ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಸಿಬ್ಬಂದಿಯವರು ಆಧುನಿಕ ತಂತ್ರಜ್ಞಾನ ಬಳಸಿ ಪ್ರಸ್ತುತ ವಿದ್ಯಾಮಾನಗಳನ್ನು ತಿಳಿದುಕೊಂಡು ತಮ್ಮ ಕಾರ್ಯಕ್ಷಮತೆ ಹೆಚ್ಚಿಸಿಕೊಳ್ಳುವುದು ಅಗತ್ಯ ನಾವು ಮಾಡುವ ಕೆಲಸಕ್ಕೆ ಗೌರವವನ್ನು ಕೊಟ್ಟು ನಿರ್ವಹಿಸಬೇಕು. ಸಿಬ್ಬಂದಿಗಳು ಮನೋವೃತ್ತಿಯನ್ನು ಪ್ರಾಮಾಣಿಕತೆ ಹಾಗೂ ಸಂಸ್ಥೆಗೆ ನಿಷ್ಠಾವಂತರಾಗಿ ಕರ್ತವ್ಯ ನಿರ್ವಹಿಸಬೇಕು. ನಮ್ಮ ಯೋಚನಾ ಲಹರಿ ಉತ್ತಮವಾಗಿ ಇದ್ದಲ್ಲಿ ಸಂಸ್ಥೆಯ ಜೀವಾಳ ನೀವಾಗಿರುತ್ತೀರಿ. ನಮ್ಮ ಸಂಸ್ಥೆ ನಮಗೆ ತಾಯಿ. ಆ ತಾಯಿ ಪೋಷಣೆ ನಮ್ಮೆಲ್ಲರ ಹೊಣೆ. ಅಲ್ಲದೆ ನಮ್ಮ ಸದಸ್ಯ ಸಹಕಾರಿಗಳಿಗೆ ಭೇಟಿ ನೀಡಿ ಮಾರ್ಗದರ್ಶನ ನೀಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಅದಕ್ಕಾಗಿ ಸಿಬ್ಬಂದಿಗಳು ವಹಿಸಿದ ಕೆಲಸಕ್ಕೆ ಸೀಮಿತವಾಗದೆ ಬಹುಮುಖಿ ಪ್ರತಿಭೆಯನ್ನು ಹೊಂದಲೇಬೇಕು. ಏಕೆಂದರೆ ಸೌಹಾರ್ದ ಚಳುವಳಿಯು ಬಹುದೊಡ್ಡ ಆಶಯವನ್ನು ಹೊಂದಿದೆ. ಈ ನಿಟ್ಟಿನಲ್ಲಿ ಗಣನೀಯವಾಗಿ ಸಾಧನೆ ಮಾಡಿದ್ದೇವೆ ಸಾಧನೆಯ ಜೊತೆಗೆ ಇನ್ನೂ ಹೆಚ್ಚಿನ ಮೌಲ್ಯಯುತವಾಗಿ ಕಾರ್ಯನಿರ್ವಹಿಸಬೇಕಿದೆ. ಇಂತಹ ಮಹತ್ ಕಾರ್ಯಗಳು ಸಿಬ್ಬಂದಿಗಳಿಂದಲೇ ಆಗಬೇಕಿದೆ ಹಾಗಾಗಿ ಎಲ್ಲರೂ ಈ ತರಬೇತಿಯ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು.

### ಸಿಬ್ಬಂದಿಯವರಲ್ಲಿ ಶಿಸ್ತು, ಕಾರ್ಯಕ್ಷಮತೆ ಅಗತ್ಯ – ಶ್ರೀ ಬಿ. ಎಸ್. ಗುಂಡೂರಾವ್.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ.ಎಸ್ ಗುಂಡುರಾವ್‌ರವರು ಸಂಯುಕ್ತ ಸಹಕಾರಿಯ ಸಿಬ್ಬಂದಿ ವರ್ಗದವರಿಂದ ಆಡಳಿತ ಮಂಡಲಿಯು ಶಿಸ್ತು, ಕಾರ್ಯಕ್ಷಮತೆ ಹಾಗೂ ದಕ್ಷತೆಯನ್ನು ಅಪೇಕ್ಷಿಸುತ್ತದೆ. ಸಂಯುಕ್ತ ಸಹಕಾರಿಗೆ ಭೇಟಿ ನೀಡಿದ ಯಾವುದೇ ಸೌಹಾರ್ದ ಸಹಕಾರಿಯ ಪ್ರತಿನಿಧಿ ನಿರಾಶೆಯಿಂದ ಹೋಗಬಾರದು ಸಂತೋಷದಿಂದ ತನ್ನ ಕೆಲಸವನ್ನು ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಮಾಡಿಕೊಟ್ಟಿದ್ದಾರೆ ಎಂಬ ತೃಪ್ತಿ ಅವರಲ್ಲಿರುವ ಹಾಗೆ ಸಿಬ್ಬಂದಿಯು ಕೆಲಸಕಾರ್ಯಗಳನ್ನು ನಿರ್ವಹಿಸಬೇಕು.

### ಸಿಬ್ಬಂದಿಯವರು ನಿರಂತರ ಅಪ್‌ಡೇಟ್ ಆಗಿರುವುದು ಅವಶ್ಯಕ – ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ

ಸಂಯುಕ್ತ ಸಹಕಾರಿಯು ಶಿಕ್ಷಣ, ತರಬೇತಿ, ಪ್ರಚಾರ ಹಾಗೂ ಶಾಸನಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಈ 04 ವಿಭಾಗಗಳಲ್ಲಿ ಪರಿಣಿತಿಯನ್ನು ಸಾಧಿಸುವುದು ಅಗತ್ಯ ಪ್ರತಿವರ್ಷವೂ ಹೊಸ ಹೊಸ ವಿಷಯಗಳನ್ನು ಏರ್ಪಡಿಸಲಾಗುತ್ತಿದೆ.

ಅವೆಲ್ಲ ಪ್ರಯತ್ನಗಳ ಫಲಕಾರಿಯಾಗಿಸುವುದು ಸಿಬ್ಬಂದಿಯವರ ಕರ್ತವ್ಯವಾಗಿದೆ. ಎಂದು ತಿಳಿದರು.

**ಸಿಬ್ಬಂದಿಯವರ ಜೊತೆಗೆ ಆಡಳಿತ ಮಂಡಳಿ ಸ್ಪಂದಿಸುತ್ತದೆ ಚೆನ್ನಾಗಿ ಕೆಲಸಮಾಡಿ – ಶ್ರೀ ಎ. ಆರ್. ಪ್ರಸನ್ನಕುಮಾರ**

ದಿನಾಂಕ 28.04.2024 ರಂದು ಸಂಜೆ 4:45ಕ್ಕೆ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನಕುಮಾರ ಇವರು ಮಾತನಾಡಿ ಪ್ರತಿಯೊಂದು ಸಮಸ್ಯೆಗೆ ಪರಿಹಾರ ಇದ್ದೇ ಇರುತ್ತದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಕೌಶಲ್ಯತೆ ಹೊರಗಿನಿಂದ ಬರುವುದಲ್ಲ ಅದನ್ನು ನಾವು ಬೆಳೆಸಿಕೊಳ್ಳವುದು ಅಗತ್ಯ. ಸಂಯುಕ್ತ ಸಹಕಾರಿ ಸಿಬ್ಬಂದಿಯ ಅಭಿವೃದ್ಧಿಗಾಗಿ ಆಡಳಿತ ಮಂಡಲಿ ಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಈ ಬಗ್ಗೆ ಸಿಬ್ಬಂದಿಗಳು ನಿಮ್ಮ ತೊಂದರೆಗಳನ್ನು ನಿರ್ವಹಿಸುವ ಮತ್ತು ನಿಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಶಕ್ತಿಯನ್ನು ಸಂಪಾದನೆ ಮಾಡಿಕೊಳ್ಳುವುದಕ್ಕಾಗಿ ಈ ತರಬೇತಿ ಪೂರಕವಾಗಿದೆ ಎಂದು ತಿಳಿಸಿದರು.

ತರಬೇತಿಯ ಮೊದಲ ದಿನ ಶ್ರೀ ಶರಣಗೌಡ ಜಿ. ಪಾಟೀಲ್, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ & ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಮತ್ತು ಆಂತರಿಕ ಸಂಬಂಧಗಳ ನಿರ್ವಹಣೆ ಕುರಿತು ಮತ್ತು ಡಾ. ಕೃಷ್ಣ, ಮಾನ್ಯ ಕಾರ್ಪೋರೇಟ್ ಟ್ರೈನರ್ ಬೆಂಗಳೂರು ಇವರು ಕೌಶಲ್ಯ ಅಭಿವೃದ್ಧಿ ಕುರಿತು ಉಪನ್ಯಾಸ ನೀಡಿರುತ್ತಾರೆ. ಶ್ರೀ ಗುರುಸ್ವಾಮಿ, ಮಾನ್ಯ ಸಹಕಾರಿಗಳ ಅಪರ ನಿಬಂಧಕರು, ಬೆಂಗಳೂರು ಸೌಹಾರ್ದ ಸಹಕಾರಿ ಪರೀವೀಕ್ಷಣೆ ಹಾಗೂ ವಿಚಾರಣೆ – ಕ್ರಮ, ವರದಿ, ಗಮನಿಸಬೇಕಾದ ಅಂಶಗಳು, ಕೈಗೊಳ್ಳಬಹುದಾದ ಹಂತಗಳು ಹಾಗೂ ಪರಿವೀಕ್ಷಣೆ ನಂತರ ಜರುಗಿಸಬೇಕಾದ ಕ್ರಮಗಳು ಕುರಿತು. ಶ್ರೀಮತಿ ಸಿಂಧು, ಮಾನ್ಯ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ತಂತ್ರಜ್ಞಾನ ಬಳಕೆ ಕುರಿತು ಉಪನ್ಯಾಸ ನೀಡಿರುತ್ತಾರೆ.

ತರಬೇತಿಯ 2ನೇ ದಿನ ಶ್ರೀ ಶರಣಗೌಡ ಜಿ. ಪಾಟೀಲ್, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಆಂತರಿಕ ಶಿಸ್ತು ಹಾಗೂ ಸಮಯ ಪಾಲನೆ, ಒತ್ತಡ ನಿರ್ವಹಣೆ ಕುರಿತು ಉಪನ್ಯಾಸ ನೀಡಿರುತಾರೆ. ಸೌಹಾರ್ದ ಸಹಕಾರಿಯ ಸಮಾಪನಾಧಿಕಾರಿಯ ಕರ್ತವ್ಯ ಹಾಗೂ ಜವಾಬ್ದಾರಿಗಳು ಮತ್ತು ಸಕ್ಷಮ ಪ್ರಾಧಿಕಾರದ ಕಾರ್ಯವಿಧಾನ ಕುರಿತು ಶ್ರೀ ಕಲ್ಲಪ್ಪ ಓಬಣ್ಣಗೋಳ್, ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು, ಕಾನೂನು ಕೋಶ, ನಿಬಂಧಕರ ಕಛೇರಿ, ಬೆಂಗಳೂರು ಇವರು ಉಪನ್ಯಾಸ ನೀಡಿದರು. ಕಿರಿಯ ಸಹಾಯಕ ವರ್ಗದವರ ಮೇಲ್ಪಟ್ಟ ಎಲ್ಲಾ ಸಿಬ್ಬಂದಿಗಳಿಗೆ ಕಡತ ಹಾಗೂ ದಾಖಲಾತಿ ನಿರ್ವಹಣೆ ಕುರಿತು ಶ್ರೀ ಗುರುಸ್ವಾಮಿ, ಮಾನ್ಯ ಸಹಕಾರಿಗಳ ಅಪರ ನಿಬಂಧಕರು, ಬೆಂಗಳೂರು ಇವರು ಉಪನ್ಯಾಸ ನೀಡಿದರು ಹಾಗೂ ಉಪ ಸಿಬ್ಬಂದಿಯವರು ಉಪಸಿಬ್ಬಂದಿ ಕಂ. ವಾಹನ ಚಾಲಕ ಹಾಗೂ ವಾಹನ ಚಾಲಕರು ಇವರಿಗೆ ಶ್ರೀ ಹೆಚ್.ಎಸ್. ನಾಗರಾಜಯ್ಯ, ಮಾನ್ಯ ಸಹಕಾರಿಗಳ ಅಪರ ನಿಬಂಧಕರು (ನಿ.) ಬೆಂಗಳೂರು ಇವರು ಕಡತ ಹಾಗೂ ದಾಖಲಾತಿ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ 101 ಸಿಬ್ಬಂದಿಗಳಲ್ಲಿ 94 ಸಿಬ್ಬಂದಿಗಳು ಭಾಗವಹಿಸಿ ಪ್ರಯೋಜನ ಪಡೆದಿರುತ್ತಾರೆ.



ಗಣ್ಯರೊಂದಿಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು



**ಬೆಳಗಾವಿ :** ದಿನಾಂಕ 20 ಏಪ್ರಿಲ್ 2024 ರಂದು ಬೆಳಗಾವಿ ಪ್ರಾಂತಿಯ ಕಛೇರಿ ಉದ್ಘಾಟನೆಗೊಂಡು ಎರಡು ವರ್ಷಗಳು ಪೂರೈಸಿದ ಹಿನ್ನಲೆಯಲ್ಲಿ ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಲಕ್ಷ್ಮೀ ಹಾಗೂ ಗಣಪತಿ ಪೂಜೆಯನ್ನು ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ರವೀಂದ್ರ ಪಾಟೀಲ, ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು, ಶ್ರೀಮತಿ ಶೋಭಾ ಆರ್, ಉಪಪ್ರಧಾನ ವ್ಯವಸ್ಥಾಪಕರು ಹಾಗೂ ಟಾಸ್ಕ್‌ಫೋರ್ಸ್ ಉಸ್ತುವಾರಿ ಬೆಳಗಾವಿ ಹಾಗೂ ಕಲಬುರ್ಗಿ ಪ್ರಾಂತ, ಶ್ರೀ ಬಸವರಾಜ ಹೊಂಗಲ, ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಪ್ರಾಂತೀಯ ಕಚೇರಿಯ ಎಲ್ಲ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ರಾಷ್ಟ್ರೀಯ ಕಾರ್ಯಕ್ರಮ - ಪ್ರಾದೇಶಿಕ ನಿರ್ದೇಶಕರ 51ನೇ ವಾರ್ಷಿಕ ಸಮ್ಮೇಳನ



**ಬೆಂಗಳೂರು :** ದಿನಾಂಕ 17ನೇ ಹಾಗೂ 18ನೇ ಏಪ್ರೀಲ್ 2024ರಂದು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು, ವೈಕುಂಟ ಮೆಹತಾ ಸಹಕಾರ ಆಡಳಿತ ತರಬೇತಿ ಸಂಸ್ಥೆ ಹಾಗೂ ದೇಶದ ಎಲ್ಲಾ ಸಹಕಾರ ಆಡಳಿತ ತರಬೇತಿ ಸಂಸ್ಥೆಗಳ ಸಮ್ಮೇಳವು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಡಾ. ಆಶಿಶ್ ಕುಮಾರ್ ಭೂತಾನಿ, ಐಎಎಸ್, ಭಾರತ ಸರ್ಕಾರದ ಸಹಕಾರ ಇಲಾಖೆಯ ಕಾರ್ಯದರ್ಶಿ, ಇವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಪಂಕಜ್ ಕುಮಾರ್ ಬನ್ಸಾಲ್, ಐಎಎಸ್, ಮಾನ್ಯ ಅಪರ ಕಾರ್ಯದರ್ಶಿ, ಕೇಂದ್ರ ಸಹಕಾರಿ ಇಲಾಖೆ ಇವರು ವಹಿಸಿದ್ದರು.

ಈ ಕಾರ್ಯಕ್ರಮವನ್ನು ಡಾ. ಮಂಜುನಾಥ ಪ್ರಸಾದ್, ಐಎಎಸ್, ಮಾನ್ಯ ಕರ್ನಾಟಕ ಸರ್ಕಾರದ ಅಪರ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಇವರು ಪ್ರಮುಖ ಭಾಷಣವನ್ನು ನಡೆಸಿಕೊಟ್ಟರು. ಕ್ಯಾಪ್ಟನ್ ಡಾ॥ ಕೆ. ರಾಜೇಂದ್ರ. ಭಾ.ಆ.ಸೇ. ಮಾನ್ಯ ಸಹಕಾರ ಸಂಘಗಳ ನಿಬಂಧಕರು, ನಿಬಂಧಕರ ಕಛೇರಿ, ಬೆಂಗಳೂರು, ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಭಾಷಣ ಮಾಡಿದರು.

ಇನ್‌ಸ್ಟಿಟ್ಯೂಟ್ ಆಫ್ ಕಾಸ್ಟ್ ಅಕೌಂಟೆಂಟ್ಸ್ ಆಫ್ ಇಂಡಿಯಾದ ಅಧ್ಯಕ್ಷರಾದ ಶ್ರೀ ಅಶ್ವಿನ್ ಜಿ ದಳವಾಡಿ, ಶ್ರೀ ಮೋಹನ್ ಕುಮಾರ್ ಮಿಶ್ರಾ, ಕಾರ್ಯದರ್ಶಿ, ನ್ಯಾಷನಲ್ ಕೌನ್ಸಿಲ್ ಫಾರ್ ಕೋ–ಆಪರೇಟಿವ್ ಟ್ರೈನಿಂಗ್, ನವದೆಹಲಿ, ಡಾ. ಹೇಮಾ ಯಾದವ್, ನಿರ್ದೇಶಕರು, ವೈಕುಮಟ ಮೆಹತಾ ನ್ಯಾಷನಲ್ ಇಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಮತ್ತು ಡಾ. ಆರ್ ಇಳಂಗೋವನ್, ನಿರ್ದೇಶಕರು, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು, ಶ್ರೀ ಕಪಿಲ್ ಮೀನಾ, ನಿರ್ದೇಶಕರು, ಭೂ ವಿಜ್ಞಾನ ಸಚಿವಾಲಯ, ಸಹಕಾರ ಶಿಕ್ಷಣ ತರಬೇತಿ, ಸಹಕಾರ ಸಚಿವಾಲಯ, ಮತ್ತು ಶ್ರೀ ಅನ್ಸುಮನ್ ಶರ್ಮಾ, ಸಹಾಯಕ. ನಿರ್ದೇಶಕರು, ಸಹಕಾರ ಶಿಕ್ಷಣ ತರಬೇತಿ, ಸಹಕಾರ ಸಚಿವಾಲಯ, ಶ್ರೀ ಸಿ ಎನ್ ದೇವರಾಜ್, ಸಿಇಒ, ದಿ ಕರ್ನಾಟಕ ಸ್ಟೇಟ್ ಕೋ ಆಪರೇಟಿವ್ ಅಪೆಕ್ಸ್ ಬ್ಯಾಂಕ್ ಲಿ., ಇವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಶ್ರೀ ಮೋಹನ್ ಕುಮಾರ್ ಮಿಶ್ರಾ, ಕಾರ್ಯದರ್ಶಿ, ಎನ್‌ಸಿಸಿಟಿ ಇವರು ಸ್ವಾಗವನ್ನು ಕೋರುತ್ತಾ ಈ ಕಾರ್ಯಕ್ರಮ ಅಧಿಕಾರಿಗಳಲ್ಲಿ ವೃತ್ತಿಪರತೆಯನ್ನು ಹೆಚ್ಚಿಸುವಲ್ಲಿ ಒತ್ತುಕೊಡುತ್ತದೆ ಎಂದು ತಿಳಿಸಿದರು.

ಡಾ. ಮಂಜುನಾಥ ಪ್ರಸಾದ್ ಇವರು ತಮ್ಮ ಅಧ್ಯಕ್ಷೀಯ ಭಾಷಣವನ್ನು ಮಾಡುತ್ತಾ ಸಹಕಾರ ಕ್ಷೇತ್ರದಲ್ಲಿ ವೃತ್ತಿಪರತೆಯನ್ನು ಹೆಚ್ಚಿಸುವುದರಿಂದ ಸಹಕಾರಿ ಕ್ಷೇತ್ರದ ವಾತಾವರಣವನ್ನೇ ಬದಲಾಯಿಸಬಹುದಾಗಿದೆ ಎಂದು ತಿಳಿಸಿದರು.

ಕ್ಯಾಪ್ಟನ್ ಡಾ॥ ಕೆ.ರಾಜೇಂದ್ರ. ಭಾ.ಆ.ಸೇ. ಇವರು ಮಾತನಾಡಿ ಸಹಕಾರ ಕ್ಷೇತ್ರದ ಸಾಧನೆಗಳನ್ನು ಪ್ರಚಾರಪಡಿಸಲು, ಸವಾಲುಗಳನ್ನು ಎದುರಿಸಲು ಈ ವೃತ್ತಿಪರತೆಯಿಂದ ಸಾಧ್ಯವಾಗುತ್ತದೆ ಅನುಭವಗಳ ಹಂಚಿಕೆಯಾಗುತ್ತದೆ ವಿಕಸಿತ ಭಾರತದತ್ತ ಸಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಉಪಸ್ಥಿತ ಗಣ್ಯರಾದ ಶ್ರೀ ಅಶ್ವಿನ್ ಜಿ ದಳವಾಡಿರವರು ಕ್ಯಾಪಾಸಿಟಿ ಬಿಲ್ಡಿಂಗ್ ಬಗ್ಗೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಉಪವಿಧಿಗಳ, ಕೃಷಿ ಪತ್ತಿನ ಸಹಕಾರ ಸಂಘಗಳ ತರಬೇತಿ ಮಾದರಿಗಳು, ಹೆಚ್‌ಡಿಸಿ ಕೋರ್ಸಿನ ಅಧ್ಯಯನ ಸಾಹಿತ್ಯಗಳನ್ನು ಬಿಡುಗಡೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭಾಗವಹಿಸಿ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಟಿಕೆಗಳ ಬಗ್ಗೆ ಮಾಹಿತಿ ನೀಡಿದರು ಮತ್ತು ಇದಕ್ಕೆ ಸಂಬಂಧಿಸಿದ ಕೈಪಿಡಿಯನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ತರಬೇತಿ ವಿಭಾಗದ ಹಿರಿಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ಇವರು ಭಾಗವಹಿಸಿದರು.




## ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳು

ದಿನಾಂಕ 19.04.2024 ರಂದು ಬೆಳಿಗ್ಗೆ 11.00 ಗಂಟೆಗೆ ಮೈಸೂರು, ಕೊಡಗು, ಮಂಡ್ಯ, ಚಾಮರಾಜನಗರ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಅನ್‌ಲೈನ್ ಮೂಲಕ "ಲೆಕ್ಕಪರಿಶೋಧನ ಪೂರ್ವಸಿದ್ಧತೆ ಮತ್ತು ಪ್ರಕ್ರಿಯೆಗಳು" ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು.

ಸದರಿ ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ. ಎಸ್. ಕೆ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು. ಇವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾರತಿ. ಜಿ. ಭಟ್,

ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಧುಕರ ಹೆಗಡೆ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಗುರುಪ್ರಸಾದ್ ಬಂಗೇರ, ಮಾನ್ಯ ಪ್ರಾಂತೀಯ ಅಧಿಕಾರಿ, ಪ್ರಾಂತೀಯ ಕಛೇರಿ, ಮೈಸೂರು ರವರು ಮತ್ತು ಪ್ರಾಸ್ತಾವಿಕ ನುಡಿಗಳನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಸುರೇಶ ಆರ್.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮೈಸೂರು ಮತ್ತು ಕೊಡಗು ಜಿಲ್ಲೆ ಇವರು ನೆರವೇರಿಸಿದರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ ಬಲರಾಮ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆ ಇವರು ನೆರವೇರಿಸಿದರು. ಸದರಿ ತರಬೇತಿಯಲ್ಲಿ ಒಟ್ಟು 115 ಸೌಹಾರ್ದ ಸಹಕಾರಿಗಳಿಂದ 120 ಸಹಕಾರಿಗಳು ಭಾಗವಹಿಸಿದ್ದರು.

ದಿನಾಂಕ 19.04.2024 ರಂದು ಮಧ್ಯಾಹ್ನ 3.00 ಗಂಟೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಆನ್‌ಲೈನ್ ಮೂಲಕ "ಲೆಕ್ಕಪರಿಶೋಧನ ಪೂರ್ವಸಿದ್ಧತೆ ಮತ್ತು ಪ್ರಕ್ರಿಯೆಗಳು" ವಿಷಯದ ಕುರಿತು ತರಬೇತಿಯನ್ನು ಆಯೋಜಿಸಲಾಗಿತ್ತು.

ಸದರಿ ತರಬೇತಿಯ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ. ಎಸ್. ಕೆ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾರತಿ. ಜಿ. ಭಟ್, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಧುಕರ ಹೆಗಡೆ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಇವರು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಗುರುಪ್ರಸಾದ್ ಬಂಗೇರ, ಮಾನ್ಯ ಪ್ರಾಂತೀಯ ಅಧಿಕಾರಿ, ಪ್ರಾಂತೀಯ ಕಚೇರಿ ಮೈಸೂರು ಮತ್ತು ಪ್ರಾಸ್ತಾವಿಕ ನುಡಿಗಳನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಶ್ರೀ ವಿಜಯ್ ಬಿ.ಎಸ್. ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಇವರು ನೆರವೇರಿಸಿದರು. ಸದರಿ ತರಬೇತಿಯಲ್ಲಿ ಒಟ್ಟು 220 ಸೌಹಾರ್ದ ಸಹಕಾರಿಗಳಿಂದ 232 ಸಹಕಾರಿಗಳು ಭಾಗವಹಿಸಿದ್ದರು.

## ಉದ್ಘಾಟನೆ



**ದಕ್ಷಿಣ ಕನ್ನಡ :** ಶ್ರೀ ಜಯದೇವಿ ಸೌಹಾರ್ದ ಸಹಕಾರಿ ನಿ., ಇದರ ಪುನರ್ಶ್ಚೇತನ/ಪುನಾರಂಭ ಕಾರ್ಯಕ್ರಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಾಪನೆ ಹಂತದಲ್ಲಿದ್ದ ಶ್ರೀ ಜಯದೇವಿ ಸೌಹಾರ್ದ ಸಹಕಾರಿ ನಿ., ಈ ಸಹಕಾರಿಗೆ ಪುನರಶ್ಚೇತನ ಕಾರ್ಯಗಳನ್ನು ಕೈಗೊಂಡ ಪರಿಣಾಮವಾಗಿ ದಿನಾಂಕ : 14.04.2024ರ ಭಾನುವಾರ ದಂದು ಜಯ ಭಾರತ ಸೌಹಾರ್ದ ಸಹಕಾರಿ ಸಂಘ ನಿ., ಎಂಬ ನೂತನ ಹೆಸರಿನೊಂದಿಗೆ ಸದರಿ ಸಹಕಾರಿಯನ್ನು ಮಂಗಳೂರಿನ ತೊಕ್ಕೊಟ್ಟು ಇಲ್ಲಿ ಉದ್ಘಾಟನೆ ಮಾಡಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು, ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಸುರೇಶ್ ರೈ ರವರು ಹಾಗೂ ಒಕ್ಕೂಟದ ನಿರ್ದೇಶಕರಾದ ಶ್ರೀ ಭಾಸ್ಕರ್‌ದೇವಸ್ಯ ಹಾಗೂ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಮೇ ಹಾಗೂ ಜೂನ್ ತಿಂಗಳಿನಲ್ಲಿ 2 ದಿನಗಳ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಬಗ್ಗೆ ಈಗಾಗಲೇ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಿಂದ whatsapp ಮೂಲಕ ವಿಷಯ ತಿಳಿಸಲಾಗಿದೆ.
2. ರಾಜ್ಯದಲ್ಲಿ 10 ಕೋಟಿಗಳಿಗಿಂತ ಹೆಚ್ಚು ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಹಿರಿಯ ಅಧಿಕಾರಿಗಳಿಗಾಗಿ 2 ದಿನಗಳ ತರಬೇತಿ ಕಾರ್ಯಕ್ರಮವನ್ನು ಜೂನ್ ಮಾಹೆಯಲ್ಲಿ ಹಮ್ಮಿಕೊಳ್ಳಲಾಗುವುದು.
3. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿರುವ ಸಂಪನ್ಮೂಲ ವ್ಯಕ್ತಿಗಳ ಸಮಾಲೋಚನಾ ಸಭೆಯನ್ನು ಮೇ ಕೊನೆಯ ವಾರದಲ್ಲಿ ಹಮ್ಮಿಕೊಳ್ಳಲಾಗುವುದು.
4. ಜುಲೈ 1 ರಿಂದ ಜುಲೈ 7 ರವರೆಗೆ ಪಟ್ಟಣ ಸಹಕಾರಿ ಬ್ಯಾಂಕುಗಳ ಕಿರಿಯ ಸಿಬ್ಬಂದಿಯವರಿಗಾಗಿ 7 ದಿನಗಳ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗುವುದು.

## ಉದ್ಘಾಟನೆ



**ಬೆಂಗಳೂರು :** ದಿನಾಂಕ 29.04.2024 ರಂದು ಬೆಂಗಳೂರು ನಗರದ ಸೌಂದರ್ಯ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಸಹಕಾರಿಯ ಪ್ರಧಾನ ಕಛೇರಿಯ ನೂತನ ಕಟ್ಟಡದ ಉದ್ಘಾಟನೆಯನ್ನು ಪರಮಪೂಜ್ಯ ಶ್ರೀ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಪೇಜಾವರ ಮಠ, ಉಡುಪಿ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಭಾಗವಹಿಸಿ ಸಹಕಾರಿಯ ಸದಸ್ಯರಿಗೆ ಸೌಹಾರ್ದ ಸಹಕಾರಿಯ ಚಳುವಳಿ ಬಗ್ಗೆ ತಿಳಿಸಿಕೊಟ್ಟರು.

## ಸನ್ಮಾನ




**ಕಲಬುರಗಿ :** ದಿನಾಂಕ 23.04.2024 ರಂದು ಕಲಬುರಗಿ ಪ್ರಾಂತೀಯ ಕಛೇರಿಗೆ ಆಗಮಿಸಿದ ಶ್ರೀ ಡಾ ॥ ಶಿವಶರಣಪ್ಪ ಇತ್ಲಿ, ಮಾನ್ಯ ಅಧ್ಯಕ್ಷರು ಶ್ರೀ ಭ್ರಮರಾಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಇವರಿಗೆ ಸಂಯುಕ್ತ ಸಹಕಾರಿ ವತಿಯಿಂದ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಶಿವಶರಣಪ್ಪ ಇತ್ಲಿಯವರ ಸುಪುತ್ರಿ, ಕಲಬುರಗಿ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್, ಎಸ್ ಪಾಟೀಲರವರು ಹಾಗೂ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಏಪ್ರಿಲ್ – 2024 : ಶಾಸನತ್ಮಾಕ ವಿಭಾಗದ ಕಾರ್ಯಚಟುವಟಿಕೆಗಳು

**1. ವಿಶೇಷಾಧಿಕಾರಿಯ ನೇಮಕದ ಕುರಿತು.**

ತೀರ್ಥಹಳ್ಳಿ ಕೃಷಿಕರ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಜನವರಿ ಮಾಹೆಯಲ್ಲಿ ಮುಕ್ತಾಯವಾದ ಹಿನ್ನಲೆಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ–1997 ಕಲಂ 38ಎ ರನ್ವಯ ದಿನಾಂಕ: 19.04.2024ರಂದು ಸಹಕಾ–ರಿಗೆ ವಿಶೇಷಾಧಿಕಾರಿಯನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

**2. ಶ್ರೀ ಬಸವೇಶ್ವರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಜಿ॥ ಬೆಳಗಾವಿ ಸಹಕಾರಿಯ ಸಮಾಪನಾಧಿಕಾರಿ ಬದಲಾವಣೆ.**

ಮಾನ್ಯ ಸಹಕಾರಿ ಸಂಘಗಳ ಉಪ ನಿಬಂಧಕರು ಬೆಳಗಾವಿ ಇವರು ದಿನಾಂಕ 19.03.2024ರಂದು ಶ್ರೀ ಬಸವೇಶ್ವರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಜಿ॥ ಬೆಳಗಾವಿ ಸಹಕಾರಿಗೆ ಈ ಹಿಂದೆ ಸಮಾಪನಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಗಂಗಾರಾಮ ಸಗ್ಗು ಕೊಳಾಪ್ಪೆ ಇವರ ಬದಲಾಗಿ ಸಹಕಾರಿಯ ಸಮಾಪನಾಧಿಕಾರಿಯಾಗಿ ಶ್ರೀಮತಿ ಶೋಭಾ ಆರ್, ಉಪಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ, ಬೆಳಗಾವಿ ಇವರನ್ನು ನೇಮಕ ಮಾಡಿ ಆದೇಶ ಹೊರಡಿಸಿರುತ್ತಾರೆ.

**3. ದಿ. ಗಂಗಾವತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗಂಗಾವತಿ ಸಹಕಾರಿಯ ಒರ್ವ ನಿರ್ದೇಶಕರ ಅನರ್ಹತೆಯ ಕುರಿತು.**

ಮೇಲ್ಕಂಡ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಮನೋಹರಸ್ವಾಮಿ ಹಿರೇಮಠ ಇವರು ಸಹಕಾರಿಯ ಸತತ ಮೂರು ಆಡಳಿತ ಮಂಡಲಿಯ ಸಭೆಗೆ ಅನುಮತಿ ಪಡೆಯದೆ ಗೈರು ಹಾಜರಾಗಿರುವ ಹಿನ್ನಲೆಯಲ್ಲಿ ಹಾಗೂ ಸಹಕಾರಿಯಿಂದ ಸಾಲ ಪಡೆದಿದ್ದು ಸದರಿ ಸಾಲವು ಸುಸ್ಥಿಯಾಗಿರುವ ಹಿನ್ನಲೆಯಲ್ಲಿ ಶ್ರೀ ಮನೋಹರಸ್ವಾಮಿ ಹಿರೇಮಠ ಇವರನ್ನು ದಿ. ಗಂಗಾವತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗಂಗಾವತಿ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕ ಸ್ಥಾನದಿಂದ ಮುಂದಿನ ಮೂರು ವರ್ಷಗಳ ಅವಧಿಗೆ ಅನರ್ಹಗೊಳಿಸಿ ದಿನಾಂಕ 19.04.2024ರಂದು ಆದೇಶ ಹೊರಡಿಸಿರುತ್ತದೆ.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಾಧಿಸಿದ 2023-24ನೇ (ಮಾರ್ಚ್ 2024ಕ್ಕೆ ಇದ್ದಂತೆ) ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

### ಅರಿಹಂತ ಸೌಹಾರ್ದ ಸಹಕಾರಿ ಸಂಘ ನಿ., ಹುಲ್ಲೋಳಿ, ಬೆಳಗಾವಿ

| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ |
|---|---|
| ಸದಸ್ಯರ ಸಂಖ್ಯೆ | 16,600 ಸದಸ್ಯರು |
| ವಸೂಲಾದ ಶೇರು ಬಂಡವಾಳ | 1 ಕೋಟಿ 07 ಲಕ್ಷ |
| ಕಾಯ್ದಿಟ್ಟ ನಿಧಿ & ಇತರ ನಿಧಿಗಳು | 25 ಕೋಟಿ 59 ಲಕ್ಷ |
| ಠೇವುಗಳು | 254 ಕೋಟಿ 30 ಲಕ್ಷ |
| ಸಾಲಗಳು | 193 ಕೋಟಿ 58 ಲಕ್ಷ |
| ಗುಂತಾವಣೆಗಳು | 85 ಕೋಟಿ 52 ಲಕ್ಷ |
| ದುಡಿಯುವ ಬಂಡವಾಳ | 280 ಕೋಟಿ 98 ಲಕ್ಷ |
| ಒಟ್ಟು ವಹಿವಾಟು | 1646 ಕೋಟಿ 42 ಲಕ್ಷ |
| ನಿವ್ವಳ ಲಾಭ | 6 ಕೋಟಿ 66 ಲಕ್ಷ |
| ಸಾಲ + ಬಡ್ಡಿ ವಸೂಲಾತಿ | 99% |
| ಶಾಖೆಗಳು | 1+9 |

### ಪ್ರಗತಿಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಹೊಸಪೇಟೆ.

| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ |
|---|---|
| ಶೇರು ಬಂಡವಾಳ | 2,01,10,100 |
| ಠೇವಣಿಗಳು | 30,50,72,759 |
| ನಿಧಿಗಳು | 68,10,210 |
| ಪಡೆದ ಸಾಲಗಳು | 1,47,90,237 |
| ದುಡಿಯುವ ಬಂಡವಾಳ | 34,67,83,306 |
| ಒಟ್ಟು ಸಾಲಗಳು | 22,46,61,934 |
| ಒಟ್ಟು ವ್ಯವಹಾರ | 52,97,34,693 |
| ಹೂಡಿಕೆಗಳು | 10,88,91,982 |
| ಗಳಿಸಿದ ಲಾಭ | 50,28,577 |

### ಕೆಂಪೇಗೌಡ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ತುಮಕೂರು

| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ |
|---|---|
| ಶೇರು ಬಂಡವಾಳ | 121.05 |
| ಆಪದ್ಧನ ಮತ್ತು ಇತರೆ ನಿಧಿಗಳು | 1738.44 |
| ಠೇವಣಿಗಳು | 5379.23 |
| ಸಾಲ ಮತ್ತು ಮುಂಗಡಗಳು | 4092.97 |
| ಹೂಡಿಕೆಗಳು | 2754.32 |
| ಒಟ್ಟು ಲಾಭ | 218.11 |
| ಸಿ.ಆರ್.ಎ.ಆರ್ ಪ್ರಮಾಣ | 20.12 |
| ಒಟ್ಟು ಎನ್.ಪಿ.ಎ | 0.39 |

### ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಯರಗಟ್ಟಿ, ಬೆಳಗಾವಿ.

| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ |
|---|---|
| ಒಟ್ಟು ಸದಸ್ಯರು | 2394 |
| ಶೇರು ಬಂಡವಾಳ | 13,86,300 |
| ಒಟ್ಟು ನಿಧಿಗಳು | 72,02,624 |
| ಒಟ್ಟು ಠೇವಣಿಗಳು | 13,11,79,069 |
| ಸಾಲ ಮತ್ತು ಮುಂಗಡಗಳು | 10,09,29,013 |
| ದುಡಿಯುವ ಬಂಡವಾಳ | 13,97,67,993 |
| ಬ್ಯಾಂಕ್ ಮತ್ತು ನಗದು ಸಮತೋಲನ | 2,75,31,289 |
| ಹೂಡಿಕೆಗಳು | 1,07,44,598 |
| ನಿವ್ವಳ ಲಾಭ | 21,81,722 |
| ಒಟ್ಟು ವಹಿವಾಟು | 59,02,54,523 |
| ಶಾಖೆಗಳು | 03 |
| ಡಿವಿಡೆಂಡ್ 2022–23 | 20% |

### ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಹಾನಗಲ್ಲ

| ಆರ್ಥಿಕ ಅಂಶಗಳು | 31.03.2024ಕ್ಕೆ ಇದ್ದಂತೆ |
|---|---|
| ಠೇವಣಿಗಳು | 4.32 ಕೋಟಿ |
| ಸಾಲ ಹಾಗೂ ಮುಂಗಡಗಳು | 4.73 ಕೋಟಿ |
| ಒಟ್ಟು ವ್ಯವಹಾರ | 9.05 ಕೋಟಿ |
| ಷೇರು ಬಂಡವಾಳ | 12.37 ಲಕ್ಷ |
| ನಿವ್ವಳ ಲಾಭ | 28.78 ಲಕ್ಷ |

## ಉದ್ಘಾಟನೆ



ಮಾನವನ ಬದುಕಿನ ಪ್ರತಿಯೊಂದು ಹಂತದಲ್ಲಿ ಸಹಕಾರ ತತ್ವ ಅಡಗಿದೆ – ಗುರುನಾಥ ಜ್ಯಾಂತಿಕರ್.

**ಬೀದರ :** ಸಹಕಾರ ಕ್ಷೇತ್ರವು ತುಂಬಾ ವಿಶಾಲವಾಗಿದೆ ಮಾನವನ ಬದುಕಿನ ಪ್ರತಿಯೊಂದು ಹಂತದಲ್ಲಿ ಸಹಕಾರ ತತ್ವ ಅಡಗಿದೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಗುರುನಾಥ ಜ್ಯಾಂತಿಕರ್ ನುಡಿದರು. ಬೀದರ ನಗರದ ಪೋಲಾ ಸಭಾಂಗಣದಲ್ಲಿ ಆಯೋಜಿಸಿದ್ದ ವಚನ ಸೌಹಾರ್ದ ಸಹಕಾರ ಸಂಘ ನಿ., ಬೀದರ ಇದರ ಉದ್ಘಾಟನಾ ಸಮಾರಂಭದಲ್ಲಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಹಿಂದಿನ ಕಾಲದಲ್ಲಿ ಪರಸ್ಪರ ಸಹಕಾರ ಮನೋಭಾವನೆಯಿಂದ ಬಾಳಿ ಬದುಕುತ್ತಿದ್ದರು. ಪುರಾತನ ಕಾಲದಲ್ಲಿ ಹಣದ ಚಲಾವಣೆ ಇರುವುದಿಲ್ಲ ಬದಲಿಗೆ ಧಾನ್ಯಗಳು ಸೇವೆಯ ಮೂಲಕ ಸಹಕಾರ ಮಾಡುತ್ತಿದ್ದರು. ಆಧುನಿಕ ಕಾಲದಲ್ಲಿ ಸಹಕಾರ ಚಳುವಳಿಗೆ ರೂಪ ನೀಡಲು ಕಾಯ್ದೆ ನಿಯಮಗಳು ರೂಪಗೊಂಡು ಇಂದು ವಿಶಾಲವಾಗಿ ಬೆಳೆವಣಿಗೆ ಕಂಡಿದೆ. ಸಹಕಾರಿಯ ಎಲ್ಲ ನಿರ್ದೇಶಕ ಆಡಳಿತ ಮಂಡಳಿಯವರು & ಸಿಬ್ಬಂದಿವರ್ಗ ಸೌಹಾರ್ದ ಕಾಯ್ದೆ ನಿಯಮ ಮತ್ತು ತಮ್ಮ ಸಹಕಾರಿಯ ಬೈಲಾದಲ್ಲಿ ಇರುವ ಅಂಶಗಳನ್ನು ಅರಿತುಕೊಂಡು ಕಾರ್ಯನಿರ್ವಹಿಸುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ಸಾನಿಧ್ಯ ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಮಹಾಸ್ವಾಮಿಗಳು ಬಸವ ಧರ್ಮ ಪೀಠ ಬಸವಕಲ್ಯಾಣ, ಮುಖ್ಯ ಅತಿಥಿಗಳಾಗಿ ಶ್ರೀ ವಿಠಲ್ ರೆಡ್ಡಿ ಯಡಮಲ್ಲೆ ಪ್ರಧಾನ ವ್ಯವಸ್ಥಾಪಕರು, ಡಿಸಿಸಿ ಬ್ಯಾಂಕ್ ಬೀದರ, ಶ್ರೀ ರಾಜೇಂದ್ರಕುಮಾರ ಗಂದಗೆ ರಾಜ್ಯ ಉಪಾಧ್ಯಕ್ಷರು ಸರ್ಕಾರಿ ನೌಕರರ ಸಂಘ ಬೆಂಗಳೂರು, ಭಾಗವಹಿಸಿದರು. ಅಧ್ಯಕ್ಷತೆಯನ್ನು ಶ್ರೀ ಶಿವಕುಮಾರ ಸಾಲಿ ವಹಿಸಿಕೊಂಡಿದರು. ಕಾರ್ಯಕ್ರಮದಲ್ಲಿ ಶ್ರೀ ಜಗನಾಥ ಸೋರಳಿ ಯುವ ನ್ಯಾಯವಾದಿಗಳು ಬೀದರ, ಶ್ರೀ ಸಂಜೀವಕುಮಾರ ಪಾಟೀಲ್ ಉಪಾಧ್ಯಕ್ಷರು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಹಾಗೂ ಶ್ರೀ ವೀರಶಟ್ಟಿ ಕಾಮಣ್ಣಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಬೀದರ ಮತ್ತು ಕಲಬುರಗಿ ಇವರುಗಳಿಗೆ ಸನ್ಮಾನಿಸಲಾಯಿತ್ತು. ಪ್ರಾಸ್ತಾವಿಕ ನುಡಿಯನ್ನು ಪ್ರಕಾಶ ಗಂದಿಗುಡಿ ಉಪಾಧ್ಯಕ್ಷರು ವಚನ ಸೌಹಾರ್ದ ಸಹಕಾರಿ ಸಂಘ ನಿ., ಬೀದರ ಇವರು ನುಡಿದರು. ಸುರೇಶ ಪಾಟೀಲ್ ನಿರ್ದೇಶಕರು ವಚನ ಸೌಹಾರ್ದ ಸಹಕಾರಿ ಸಂಘ ನಿ., ಬೀದರ ಇವರು ಸ್ವಾಗತಿಸಿದರು. ಶಿವಶಂಕರ ಟೋಕರೆ ನಿರೂಪಿಸಿದರು, ಪ್ರಕಾಶ ಮಠಪತಿ ವಂದಿಸಿದರು. ಆಡಳಿತ ಮಂಡಳಿಯ ಸದಸ್ಯರು ಭಾಗವಹಸಿದರು.

---



**ಚಾಮರಾಜನಗರ :** ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಸಹಕಾರಿಯು ಮಹಿಳೆಯರಿಗಾಗಿ ವಿವಿಧ ಕೌಶಲ್ಯಾಭಿವೃದ್ಧಿ ತರಬೇತಿಯ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 01.04.2024ರಂದು ಹಮ್ಮಿಕೊಳ್ಳಲಾಗಿತ್ತು ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಮೈಸೂರು ಪ್ರಾಂತೀಯ ಅಧಿಕಾರಿಯಾದ ಶ್ರೀ ಗುರುಪ್ರಸಾದ ಬಂಗೇರ ಇವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಕೆ. ಶಶಿಧರನ್, ವಲಯ ಮುಖ್ಯಸ್ಥರು, ಗ್ರಾಮ ಆರೋಗ್ಯ ಯೋಜನೆ, ಕೆ.ಹೆಚ್.ಪಿ.ಟಿ ಬೆಂಗಳೂರು ಇವರು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಜೂಲಿಯೆಟ್, ಆಪ್ತ ಸಲಹೆಗಾರರು ಸ್ನೇಹ ಜ್ಯೋತಿ ಮಹಿಳಾ ಸಂಘ, ಚಾಮರಾಜನಗರ, ಶ್ರೀಮತಿ ರಾಜಮ್ಮ, ಅಧ್ಯಕ್ಷರು, ಸ್ನೇಹಾ ಜ್ಯೋತಿ ಮಹಿಳಾ ಸಂಘ, ಶ್ರೀಮತಿ ನಾಗರತ್ನಮ್ಮ, ಅಧ್ಯಕ್ಷರು, ಸ್ನೇಹ ಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ಸಂಘ ಹಾಗೂ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಚಂದ್ರಶೇಖರ್ ಎಚ್ ಪಾಟೀಲ್ ಇವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಒಟ್ಟು 62 ಮಹಿಳಾ ಸದಸ್ಯರು ಭಾಗವಹಿಸಿದ್ದರು.

# ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಯಡಿ ಆರ್ಥಿಕ, ವ್ಯವಹಾರಿಕ ಮತ್ತು ಆಡಳಿತಾತ್ಮಕ ವಿಷಯದಲ್ಲಿ ಮಧ್ಯಪ್ರವೇಶ ಮಾಡಬಹುದೇ ಮತ್ತು ಕಲಂ.70ರಡಿ ಇದಕ್ಕೆ ಅವಕಾಶವಿದೆಯೇ?



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

**ಶ್ರೀ ಸಿ.ಎನ್ ಪರಶಿವಮೂರ್ತಿಯವರು ಸಹಕಾರ ಇಲಾಖೆಯ ನಿವೃತ್ತ ಅಪರ ನಿಬಂಧಕರು, ಸೌಹಾರ್ದ ಸಹಕಾರಿ ಕಾಯ್ದೆ 'ಕರಡು' ರೂಪಿಸಿದ ಹಿರಿಯರು, ಸೌಹಾರ್ದ ಸಹಕಾರಿ ಕಾಯ್ದೆ, ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳಿಗೆಲ್ಲಾ ಮಾರ್ಗದರ್ಶನ ಮಾಡುತ್ತಲೆ ಬಂದಿದ್ದಾರೆ. ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಅವರ ಅಭಿಪ್ರಾಯ ಲೇಖನ ರೂಪದಲ್ಲಿ ಮಂಡಿಸಿದ್ದಾರೆ.**

ಕರ್ನಾಟಕ ಸರ್ಕಾರ ಒಂದು ಆದೇಶವನ್ನು ಸಿ.ಒ/38/ಸಿಎಲ್‌ವಿಮ/2024 ದಿನಾಂಕ 16.03.2024 ರಂದು ಹೊರಡಿಸಿ, ಸಹಕಾರಿಗಳ ಆರ್ಥಿಕ, ಆಡಳಿತಾತ್ಮಕ ಮತ್ತು ವ್ಯವಹಾರಿಕ ವಿಷಯಗಳ ಬಗ್ಗೆ ಒಂದು ಆದೇಶ ಮಾಡಿ, ಅಂತಹ ಸಹಕಾರಿಗಳನ್ನು ನಿಯಂತ್ರಿಸಲು ಮಧ್ಯಪ್ರವೇಶ ಮಾಡಿದೆ. ಅಂದರೆ ಸೌಹಾರ್ದ ಸಹಕಾರಿಗಳು ಠೇವಣಿ ಸಂಗ್ರಹಣೆ, ಸಾಲ ನೀಡಿಕೆ, ಒಡ್ಡಿ ನಿಗದಿ, ಸಾಲ ವಸೂಲಾತಿ, ಭದ್ರತೆ, ಬ್ಯಾಂಕಿಂಗ್ ವ್ಯವಹಾರ ಮತ್ತಿತರ ವಿಷಯಗಳ ಬಗ್ಗೆ ನಿರ್ದೇಶನ ನೀಡಿದೆ. ಈ ಬಗ್ಗೆ ವಿಮರ್ಷೆ ಮಾಡಲು ವಿವಿಧ ಮಟ್ಟದಲ್ಲಿ ಇಲಾಖಾಧಿಕಾರಿಗಳ ಮುಖಂಡತ್ವದಲ್ಲಿ ಸಮಿತಿಗಳನ್ನು ರಚಿಸಿ, ಪರಿಶೀಲನೆ ಮಾಡಲು ಅವಕಾಶ ಕಲ್ಪಿಸಿದೆ.

ಈ ಕಾಯಿದೆ ರೂಪಿಸುವಾಗ ರಾಜ್ಯಕ್ಕೆ ಎರಡು ಕಾಯಿದೆಗೆ ಬೇಕು ಮತ್ತು 1959ರ ಕಾಯಿದೆ ಇಲಾಖೆ ನಿಯಂತ್ರಣದಲ್ಲಿ ಮತ್ತು 1997 ರ ಸೌಹಾರ್ದ ಸಹಕಾರಿ ಕಾಯಿದೆಯಡಿ, ನಿಬಂಧಕರ ಜವಾಬ್ದಾರಿಯೂ ಸಹಕಾರಿ ನೋಂದಣಿ ಮತ್ತು ಸಮಾಪನೆ ಹೊರತು ಪಡಿಸಿ, ಇನ್ನಿತರ ಕೆಲಸಗಳನ್ನು ನಿರ್ವಹಿಸಲು ಕಾಯಿದೆಯಲ್ಲಿಯೇ ಸೃಷ್ಟಿ ಮಾಡಿದ "ಸಂಯುಕ್ತ ಸಹಕಾರಿ" ಎಂಬ ಸಂಸ್ಥೆ ಸೃಷ್ಟಿಸಿ, ಅದಕ್ಕೆ ಕಾಯಿದೆ ಕಲಂ.53(7) ರಲ್ಲಿ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿಗದಿ ಪಡಿಸಿದೆ. ಅದರಂತೆ ಸಂಯುಕ್ತ ಸಹಕಾರಿ ಆಗಿಂದಾಗ್ಗೆ ಸದಸ್ಯ ಸಹಕಾರಿಗಳಿಗೆ ಮಾರ್ಗದರ್ಶನ ಸೂತ್ರಗಳನ್ನು ರೂಪಿಸುತ್ತಿದೆ ಮತ್ತು ಒಂದು ಸುಧೀರ್ಘ ಮಾಸ್ಟರ್ ಕಾರ್ಯಸೂಚಿ ತಯಾರಿಸಿ, ಸದಸ್ಯ ಸಹಕಾರಿಗಳಿಗೆ ನೀಡಿದೆ. ಅದರಂತೆ ಸದಸ್ಯ ಸಹಕಾರಿಗಳು ಆ ನೀತಿ ಪಾಲಿಸದಿದ್ದರೆ, ಅಂತಹ ಸದಸ್ಯ ಸಹಕಾರಿಗಳ ಮೇಲೆ ಕಲಂ.25, 38, 38ಎ ಮಂಡಳಿ ಸದಸ್ಯತ್ವದಿಂದ ತೆಗೆದು ಹಾಕುವುದು, ಆಡಳಿತಾಧಿಕಾರಿ ಮತ್ತು ವಿಶೇಷಾಧಿಕಾರಿ ನೇಮಕ ಮಾಡುವ ಅಧಿಕಾರ ಸಂಯುಕ್ತ ಸಹಕಾರಿ ಮಂಡಳಿಗೆ ವಿಹಿತವಾಗಿದೆ. ಇದರ ಜೊತೆಗೆ ಕಾಯಿದೆ ಕಲಂ.53(7) ರಲ್ಲಿ ಸಂಯುಕ್ತ ಸಹಕಾರಿ, ಸದಸ್ಯ ಸಹಕಾರಿಗಳ ಕಾರ್ಯನಿರ್ವಹಣೆ, ಸಲಹೆ, ಸೂಚನೆ, ಮತ್ತು ಮಾರ್ಗದರ್ಶನ ನೀಡಲು ಅವಕಾಶ ಕಲ್ಪಿಸಿದೆ. ಅಂದರೆ ಸದಸ್ಯ ಸಹಕಾರಿಗಳು ಇಂತಹ ಸೂಚನೆ, ಮಾರ್ಗದರ್ಶನ ಮತ್ತು ಮಂಡಳಿ ಸದಸ್ಯರು ಅವರ ಕರ್ತವ್ಯ ಮತ್ತು ಜವಾಬ್ದಾರಿ ನಿರ್ವಹಿಸದಿದ್ದರೆ, ಸಂಯುಕ್ತ ಸಹಕಾರಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲಾಗದು. ಅಂದರೆ ನಿಬಂಧಕರು ನಿರ್ವಹಿಸುತ್ತಿದ್ದು. ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕ ಎಂಬ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿ ನಿರ್ವಹಿಸುತ್ತಿದೆ. ಇಂತಹ ಜವಾಬ್ದಾರಿಯನ್ನು ನಿರ್ವಹಿಸುವಂತೆ ಸದಸ್ಯ ಸಹಕಾರಿಗಳಿಗೆ ಸೂಚನೆ ನೀಡುವುದು ಅದರ ಜವಾಬ್ದಾರಿ ಮತ್ತು ಕರ್ತವ್ಯ. ಅಂತಹ ಸದಸ್ಯ ಸಹಕಾರಿಗಳ ಮೇಲೆ ಕ್ರಮ ಜರುಗಿಸಲು ಸಂಯುಕ್ತ ಸಹಕಾರಿ ವಿಫಲವಾದರೆ, ನಿಬಂಧಕರು ಮಧ್ಯಪ್ರವೇಶ ಮಾಡಲು ಕಲಂ.53ಬಿ, ಕಲಂ.55 ಅವಕಾಶ ಕಾಯಿದೆಯಡಿ ನೀಡಿದೆ. ಅಂದರೆ ಸಂಯುಕ್ತ ಸಹಕಾರಿ ಕಲಂ.53(7) ಮತ್ತು 56 ರಡಿ ನಿಗದಿ ಪಡಿಸಿದ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿರ್ವಹಿಸದಿದ್ದರೆ ನಿಬಂಧಕರು, ಸಂಯುಕ್ತ ಸಹಕಾರಿ ಮಂಡಳಿ ಮೇಲೆ ಕ್ರಮ ಜರುಗಿಸುವ ಅಧಿಕಾರಿ ಮತ್ತು ಜವಾಬ್ದಾರಿಯನ್ನು ಕಾಯಿದೆ ನೀಡಿದೆ.

ಆದರೆ ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಗಳ ಮೇಲೆ ನೇರವಾಗಿ ಮದ್ಯಪ್ರವೇಶ ಮಾಡಲು ಕಾಯಿದೆ ಯಾವುದೇ ಅಧಿಕಾರಿ ನಿಬಂಧಕರುಗಳ/ಸರ್ಕಾರಕಕ್ಕೆ ನೀಡಿಲ್ಲ. ಅಂದರೆ ಕಾಯಿದೆ ಸೃಷ್ಟಿಯಾಗಿ ಯಾವ ಪ್ರಾಧಿಕಾರ ಎನು ಮಾಡಬೇಕೆಂದು ನಿಗದಿ ಪಡಿಸಿದೆ, ಅದನ್ನು ಮುರಿಯುವ ಪ್ರಯತ್ನ ಸರ್ಕಾರ ಮಾಡಬಾರದು. ಏಕೆಂದರೆ ಸೌಹಾರ್ದ ಕಾಯಿದೆ ರಚನೆ ಮಾಡುವಾಗ ಸರ್ಕಾರ ರೂಪಿಸಿದ ಧ್ಯೇಯೋದ್ದೇಶ

"ಸದಸ್ಯರೇ, ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮೇಲೆ ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ದಯಮ .........................." ಎಂದು

ಸ್ಪಷ್ಟವಾಗಿ ನಿಗದಿ ಪಡಿಸಿದೆ. ಸದಸ್ಯ ಸಹಕಾರಿಗಳು ತಮ್ಮ ಮಂಡಳಿಗೆ ನಿಗದಿ ಪಡಿಸಿದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸದಿದ್ದರೆ, ಅದನ್ನು ನಿಯಂತ್ರಿಸಲು ಕಲಂ.25, 38 ಮತ್ತು 38ಎ ಅಡಿ ಸಂಯುಕ್ತ ಸಹಕಾರಿಗೆ ನಿಗದಿ ಪಡಿಸಿದೆ. ಇದರ ಜೊತೆಗೆ ಸಂಯುಕ್ತ ಸಹಕಾರಿಯೂ ಮುಖ್ಯಕಾರ್ಯನಿರ್ವಹಕ ಯಾವುದೇ ಸದಸ್ಯ ಸಹಕಾರಿ ವ್ಯವಹಾರದ ಬಗ್ಗೆ ಸ್ಪಷ್ಟೀಕರಿಸಿಕೊಳ್ಳಲು ಮತ್ತು ವಿಚಾರಣೆ ನಡೆಸಲು ಅಧಿಕಾರ ನೀಡಿದೆ ಮತ್ತು ಆ ವರದಿ ಆಧಾರದ ಮೇಲೆ ಸದಸ್ಯ ಸಹಕಾರಿಗಳ ಮೇಲೆ ಶಾಸನಾತ್ಮಕ ಕ್ರಮ ಜರುಗಿಸಲು ಸಂಯುಕ್ತ ಸಹಕಾರಿ ಮಂಡಳಿಯ ಕರ್ತವ್ಯ ಮತ್ತು ಜವಾಬ್ದಾರಿ. ಅಂದರೆ ಸಂಯುಕ್ತ ಸಹಕಾರಿ, ಸದಸ್ಯರ ಮೇಲೆ ಕ್ರಮ ಜರುಗಿಸಲು, ಸಂಯುಕ್ತ ಸಹಕಾರಿ ಮಂಡಳಿ ಹೊರತು ಪಡಿಸಿ, ಮತ್ತಾರೂ ಜವಾಬ್ದಾರರಲ್ಲ. ಸರ್ಕಾರಕ್ಕೆ ಸಂಯುಕ್ತ ಸಹಕಾರಿ ತನ್ನ ಕರ್ತವ್ಯವನ್ನು ಸಮರ್ಪಕ ನಿರ್ವಹಣೆ ಮಾಡುತ್ತಿಲ್ಲವೆಂದು ಗಮನಕ್ಕೆ ಬಂದರೆ ಕಲಂ.53ಬಿ ಮತ್ತು ಕಲಂ.55ರಡಿ ಮತ್ತು ಕಲಂ.65 ಹಾಗೂ 66ರಡಿ ನಿಬಂಧಕರಿಗೆ ಅಧಿಕಾರ ನೀಡಿದೆ. ಇದನ್ನು ಹೊರತು ಪಡಿಸಿ ಯಾವುದೇ ನಿರ್ದೇಶನ ನೀಡಲು ಅವಕಾಶವಿಲ್ಲ.

1959ರ ಕಾಯಿದೆ ಕಲಂ.121 ಮತ್ತು 1997ರ ಸೌಹಾರ್ದ ಕಾಯಿದೆ ಕಲಂ.70 ಎರಡರಲ್ಲೂ ಒಂದೇ ಅವಕಾಶ ನೀಡಲಾಗಿದೆಯೇ?

**ಕಲಂ.121**

"ರಾಜ್ಯ ಸರ್ಕಾರವು ರಾಜ್ಯ ಪತ್ರದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶವನ್ನು ಪ್ರಕಟಿಸುವ ಮೂಲಕ ಯಾವುದೇ ಸಹಕಾರಿ ಸಂಘವನ್ನು ಅಥವಾ ಸಹಕಾರ ಸಂಘಗಳ ಯಾವುದೇ ವರ್ಗವನ್ನು, ಈ ಅಧಿನಿಯಮದ ಯಾವುದೇ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು ಅಥವಾ ಅಂಥ ಉಪಬಂಧಗಳು ಅಂಥ ಸಂಘಕ್ಕೆ ಅಥವಾ ಸಂಘಗಳ ವರ್ಗಕ್ಕೆ ಆ ಆದೇಶದಲ್ಲಿ ನಿರ್ದಿಷ್ಟ ಪಡಿಸಬಹುದಾದ ಅಂತಹ ಮಾರ್ಪಾಟುಗಳೊಂದಿಗೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು."

**ಸೌಹಾರ್ದ ಕಾಯಿದೆ ಕಲಂ70**

**"ತೊಂದರೆಗಳನ್ನು ನಿವಾರಿಸಲು ಅಧಿಕಾರ :**

ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉಂಟಾದರೆ ಅಥವಾ ಸ್ಪಷ್ಟೀಕರಣದ ಅವಶ್ಯಕವಿದ್ದರೆ, ಸರ್ಕಾರವು, ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸಲು ಅಗತ್ಯವೆಂದು ಅಥವಾ ಯುಕ್ತವೆಂದು ಕಂಡು ಬರುವ ಉಪಬಂಧಗಳನ್ನು ಮಾಡಬಹುದು."


**ಮೇಲ್ಕಂಡ ಎರಡು ಕಾಯಿದೆಯಡಿ ನೀಡಬಹುದಾದ ನಿರ್ದೇಶನದಲ್ಲಿ ಬಹಳ ವ್ಯತ್ಯಾಸವಿದೆ.**

1959ರ ಕಾಯಿದೆ ಕಲಂ.121ಕ್ಕೆ ಸಮಾನಾಂತರವಾಗಿ ತಮಿಳುನಾಡು ಸಹಕಾರಿ ಕಾಯಿದೆ ಕಲಂ.60ರಡಿ ಶ್ರೇಷ್ಠ ನ್ಯಾಯಾಲಯದ ಪರಿಶೀಲನೆಗೆ ಬಂದಾಗ, ಇಂತಹ ಅವಕಾಶ ಕಾಯಿದೆಯಲ್ಲಿ ಅವಶ್ಯಕ ಎಂದು ತೀರ್ಮಾನಿಸಿದೆ. ಅದರಂತೆ, 1959ರ ಕಾಯಿದೆಯ ಯಾವುದೇ ಕಲಂನ್ನು ಜಾರಿ ಮಾಡುವಾಗ ತೊಂದರೆ ಬಂದಾಗ, ಆ ಕಲಂನಿಂದ ವಿನಾಯ್ತಿ ನೀಡುವುದು, ಮಾರ್ಪಡಿಸುವುದು ಮತ್ತು ಇತರ ಯಾವುದೇ ಸೇರ್ಪಡೆಯೊಂದಿಗೆ ಆದೇಶಿಸಲು ಅವಕಾಶ ಕಲ್ಪಿಸಿದೆ. ಆದರೆ 1997ರ ಸೌಹಾರ್ದ ಸಹಕಾರಿ ಕಾಯಿದೆಯಡಿ, ಯಾವುದೇ ವಿನಾಯಿತಿ ನೀಡಲು ಬರುವುದಿಲ್ಲ ಮತ್ತು ಕಾಯಿದೆ ಕಲಂ.53(7)ರಲ್ಲಿ ಸದಸ್ಯ ಸಹಕಾರಿಗಳ ಕಾರ್ಯನಿರ್ವಹಣೆಯಲ್ಲಿ ಮಾರ್ಗದರ್ಶ ಸೂತ್ರಗಳನ್ನು ರೂಪಿಸಲು ಸಂಯುಕ್ತ ಸಹಕಾರಿಗೆ ಅಧಿಕಾರ ನೀಡಿದೆ. ಆ ಅಧಿಕಾರವನ್ನು ಕಾಯಿದೆಯಿಂದ ಕುತ್ತು ಸರ್ಕಾರವೇ ನಿರ್ವಹಿಸುವ ಅಧಿಕಾರ ಪಡೆಯದೆ. 16.03.2024 ರಂದು ರೂಪಿಸಿದ ನೀತಿಯನ್ನು 1997 ರ ಸೌಹಾರ್ದ ಕಾಯಿದೆಯಲ್ಲಿ ನೋಂದಾಯಿಸಿದ ಸೌಹಾರ್ದ ಸಹಕಾರಿಗಳನ್ನು ನಿಯಂತ್ರಿಸಲು ಅವಕಾಶ ನೀಡುವುದಿಲ್ಲ. ಇದರ ಜೊತೆಗೆ ಇಲಾಖಾಧಿಕಾರಿಗಳು ಪ್ರತಿ ತಿಂಗಳು ಪ್ರಗತಿ ಪರಿಶೀಲನೆ ಮಾಡಲು ಅವಕಾಶ ನೀಡುವುದಿಲ್ಲ.

ಈ ಆದೇಶ ಕರ್ನಾಟಕ ಸರ್ಕಾರದ ಸಹಕಾರ ಇಲಾಖೆ, ಕಾಯಿದೆಯಡಿ ನೀತಿ ರೂಪಿಸಿರುವುದು ಆರ್ಥಿಕ, ಆಡಳಿತಾತ್ಮಕ ಮತ್ತು ಸ್ವಾಯತ್ತತೆ ತತ್ವಕ್ಕೆ ವಿರುದ್ಧ. ಈ ಆದೇಶವನ್ನು ಸಂಯುಕ್ತ ಸಹಕಾರಿ ಈಗಾಗಲೇ ಮಾಸ್ಟರ್ ಸುತ್ತೋಲೆ ಮೂಲಕ ಜಾರಿ ಮಾಡಿದೆ. ಆ ಮಾರ್ಗಸೂಚಿಯನ್ನು ಜಾರಿ ಮಾಡಲು ಸಂಯುಕ್ತ ಸಹಕಾರಿಯ ಕರ್ತವ್ಯ ಮತ್ತು ಜವಾಬ್ದಾರಿ. ಅಂತಹ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿ ನಿರ್ವಹಿಸದಿದ್ದರೆ, ನಿಬಂಧಕರು ಕಲಂ.53ಬಿ, 55, 65 ಮತ್ತು 66 ರಡಿ ಕ್ರಮ ಜರುಗಿಸಿ ನಿಯಂತ್ರಿಸಬೇಕೆ ಹೊರತು, ಆ ಸಂಯುಕ್ತ ಸಹಕಾರಿ, ಸದಸ್ಯರ ಮೇಲೆ ನೇರ ಕ್ರಮ ಜರುಗಿಸಲಾಗದು. ಈ ರೀತಿ ಸರ್ಕಾರ ಮಧ್ಯಪ್ರವೇಶ ಮಾಡಿದರೆ, ಸಹಕಾರ ತತ್ವಗಳು, ಎರಡು ಸಹಕಾರಿ ಕಾಯಿದೆ ಮತ್ತು ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ಸಹಕಾರಿ ಸಂಸ್ಥೆಗಳು ಎಂಬ ಸರ್ಕಾರವೇ ರೂಪಿಸಿದ ನೀತಿಗೆ ವಿರುದ್ಧ ಮತ್ತು ಇಂತಹ ನಿರ್ದೇಶನಗಳನ್ನು ಸಹಕಾರಿ ಸಂಸ್ಥೆಗಳಿಗೆ ತಪ್ಪು ಸಂದೇಶ ನೀಡಿದಂತಾಗುತ್ತಿದೆ.

# ದಿನದ 8 ಗಂಟೆ ಮಾತ್ರ ಕೆಲಸ ಎಂದು ಮುನ್ನಡಿ ನೀಡಿದ ದಿನ ಮೇ-1 "ಕಾರ್ಮಿಕರ ದಿನಾಚರಣೆ"

– ಶ್ರೀ ಸೂರ್ಯಕಾಂತ ರ‍್ಯಾಕಲೆ, ಪ್ರಾಂತೀಯ ಅಧಿಕಾರಿ, ಕರಾಸೌಸಂಸನಿ., ಕಲಬುರಗಿ.




ಮೇ ಒಂದು, 1886 ರಂದು ಅಮೇರಿಕಾದ ಚಿಕಾಗೋದ ಇಲಿನಾಯ್ಸ್ ಪ್ರದೇಶದ ಹೇ ಮಾರ್ಕೆಟ್ ಪ್ರದೇಶದಲ್ಲಿ ಸಾವಿರಾರು ಕಾರ್ಮಿಕರು ದಿನದ 24 ಗಂಟೆಗಳಲ್ಲಿ 8 ಗಂಟೆ ಕೆಲಸಕ್ಕೆ, 8 ಗಂಟೆ ಮನೋಲ್ಲಾಸಕ್ಕೆ ಮತ್ತು 8 ಗಂಟೆ ವಿಶ್ರಾಂತಿಗೆ ಮೀಸಲಿಡಬೇಕು ಎಂದು ಆಗ್ರಹಿಸಿ ಜರುಗುತಿದ್ದ ಪ್ರತಿಭಟನೆಯನ್ನು ಹತ್ತಿಕ್ಕಲು ಬಂಡವಾಳ ಶಾಹಿಗಳ ಕುಮ್ಮಕ್ಕಿನಿಂದ ಶಾಂತಿಯುತವಾಗಿ ಜರುಗುತಿದ್ದ ಪ್ರತಿಭಟನೆ ಮೇಲೆ ದುಷ್ಕಮಿ ಬಾಂಬ ಎಸೆದಿದ್ದರಿಂದ ಪೋಲಿಸರು ಲಾಠಿ ಚಾರ್ಜ್ ಮಾಡಿದ್ದರಿಂದ ಹತ್ತಾರು ಕಾರ್ಮಿಕರು ಮರಣ ಹೊಂದಿ ನೂರಾರು ಕಾರ್ಮಿಕರು ದೌರ್ಜನ್ಯಕ್ಕೆ ಒಳಗಾದ ನೆನಪಿಗಾಗಿ ಇಂದು ಜಗತಿನಾದ್ಯಂತಾ ಮೇ–01 ರಂದು ಬಹತೇಕ ರಾಷ್ಟ್ರಗಳು ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಗುತ್ತಿದೆ.

18ನೇ ಶತಮಾನದ ಕೊನೆಯಲ್ಲಿ ಇಂಗ್ಲೆಂಡ್ ಸೇರಿದಂತೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹತ್ತಿ, ಜಿನ್ ಮತ್ತು ವಿದ್ಯೂತ್ ಮುಂತಾದ ಅವಿಸ್ಕಾರಗಳು ಪ್ರಾರಂಭವಾಗಿದ್ದರಿಂದ ಕೈಗಾರಿಕಾ ಕ್ರಾಂತಿಯು ಬೆಳೆದು ಪ್ರಪಂಚದಾದ್ಯಂತ ಹರಡಿತ್ತು. ನಿಧಾನವಾಗಿ ಬಂಡವಾಳ ಶಾಹಿಗಳು ಕಾರ್ಖಾನೆಗಳನ್ನು ಪ್ರಾರಂಭಿಸಿದರು, ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸಲು ಲಕ್ಷಾಂತರ ಕಾರ್ಮಿಕರು ಬೇಕಾಗಿದ್ದರು. ಹಾಗಾಗಿ ಸಹಜವಾಗಿ ಜನರು ತಮ್ಮ ಕುಟುಂಬಗಳ ಉತ್ತಮ ಜೀವನವನ್ನು ನಡೆಸುವ ಭರವಸೆಯಲ್ಲಿ ಕಾರ್ಖಾನೆಗಳತ್ತ ಕಾರ್ಮಿಕರು ಮುಖ ಮಾಡಿದ್ದರಿಂದ ಅಗತ್ಯ ಮತ್ತು ಅನುಕೂಲಕರ ಕೆಲಸದ ವಾತಾವರಣವಿಲ್ಲದೆ ಕಾರ್ಖಾನೆಗಳಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರನ್ನು ನೇಮಿಸಿಕೊಂಡವು. ಉತ್ಸಾಹದಿಂದ ಕೆಲಸಕ್ಕೆ ಲಕ್ಷಾಂತರ ಕಾರ್ಮಿಕರು ಹಾಜರಾಗಿ ಕಾರ್ಯನಿರ್ವಹಿಸಿ ಕೈಗಾರಿಕಾ ಕ್ರಾಂತಿಯ ಯಶಸ್ವಿಯಲ್ಲಿ ಪಾಲುದಾರರಾಗಿ ಮಾಲಿಕರಿಗೆ ಹೆಚ್ಚಿನ ಲಾಭ ತರುವಲ್ಲಿ ಶ್ರಮವಹಿಸಿದರು. ಇದರಿಂದಾಗಿ ಚಾಲ್ತಿಯಲ್ಲಿದ್ದ ಲಕ್ಷಾಂತರ ಗುಡಿ ಕೈಗಾರಿಕೆಗಳು ಬಾಗಿಲು ಮುಚ್ಚಿಕೊಂಡವು ನಿಧಾನವಾಗಿ ಗುಡಿ ಕೈಗಾರಿಕೆಯಲ್ಲಿ ಕಾರ್ಯ ನಿರ್ವಹಿಸುವವರು ಕಾರ್ಖಾನೆಗಳ ಕೆಲಸದ ಮೇಲೆ ಅವಲಂಬನೆಗೊಂಡರು. ಕಾರ್ಖಾನೆಯ ಮಾಲಿಕರು ಬಂಡವಾಳ ಶಾಹಿಗಳು ಕಾರ್ಮಿಕರ ದೌರ್ಲಬ್ಯನ್ನು ಕಂಡು ಮಾಲಿಕರು ಕಾರ್ಮಿಕರ ಹಾಗೂ ಕುಟುಂಬದ ಹಿತದ ಕಡೆ ಗಮನ ಹರಿಸದೆ ಕೇವಲ ತಮ್ಮ ಲಾಭಗಳಿಸುವ ಉದ್ದೇಶವನ್ನು ಹೊಂದಿ ಕಾರ್ಮಿಕರಿಗೆ ಕಡಿಮೆ ವೇತನ, ಧೀರ್ಘ ಕೆಲಸದ ಸಮಯ, ಉದ್ಯೋಗ ಭದ್ರತೆ ನೀಡದೆ ಸಾಮಾಜಿಕ ಭದ್ರತೆಯ ಅನುಪಸ್ಥಿತಿಯಲ್ಲಿ ಕಾರ್ಖಾನೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಮಕ್ಕಳನ್ನು ತೊಡಗಿಸಿಕೊಂಡು, ಅಸಡ್ಡೆ, ಅಮಾನವೀಯ ಮತ್ತು ಸೂಕ್ಷ್ಮತೆ ಅರಿಯದ ಅಧಿಕಾರಿಗಳು, ಸಹಾನುಭೂತಿಯಿಲ್ಲದೆ ಇರುವುದರಿಂದ ಕಾರ್ಮಿಕರ ಭರವಸೆಗಳು ನುಚ್ಚುನುರಾಗಿ ತಮ್ಮ ಆರೋಗ್ಯ ಹಾಗೂ ಕುಟುಂಬದ ನೆಮ್ಮದಿಗೆ ಧಕ್ಕೆ ಉಂಟಾಗಿದ್ದರಿಂದ ಬಂಡವಾಳ ಶಾಹಿ ಮಾಲಿಕರ ವಿರುದ್ದ ಆರಂಭಿಕ ಕಾಲದಲ್ಲಿ ಕೈಗಾರಿಕೆಗಳಲ್ಲಿ ಚಾಲ್ತಿಯಲ್ಲಿರುವ ಭಯಾನಕ ಪರಿಸ್ಥಿತಿಗಳ ಹೊರತಾಗಿಯೂ, ಮುಖ್ಯವಾಗಿ ಅರಿವಿನ ಕೊರತೆ ಮತ್ತು ಸಂಘಟನೆಯ ಪ್ರಾಮುಖ್ಯತೆಯಿಂದಾಗಿ ದುಡಿಯುವ ಜನರು ತಮ್ಮನ್ನು ತಾವು ಸಂಘಟಿಸಲು ಮೊದಲಿಗರಾಗಿರಲಿಲ್ಲ. ನಂತರ ಸಣ್ಣ ಪ್ರಮಾಣದಲ್ಲಿ ಕಾರ್ಮಿಕರು ಸಂಘಗಳನ್ನು ರಚಿಸಿಕೊಂಡು ಕಾರ್ಮಿಕರು ತಮ್ಮ ಬೇಡಿಕೆ ಇಟ್ಟುಕೊಂಡು ಹೋರಾಟ ಪ್ರಾರಂಭಿಸಿದರು, 1864 ರಲ್ಲಿ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡುವ ಉದ್ದೇಶದಿಂದ ಲಂಡನ್‌ನಲ್ಲಿ ಇಂಟರ್ನ್ಯಾಷನಲ್ ವರ್ಕಿಂಗ್‌ಮೆನ್ಸ್ ಅಸೋಸಿಯೇಷನ್ ರಚಿಸಲಾಯಿತು. ನೌಕರರು ಉತ್ತಮ ವೇತನಕ್ಕಾಗಿ ಸುರಕ್ಷಿತ ಸ್ಥಿತಿಯಲ್ಲಿ ಕೆಲಸ ಮಾಡಬೇಕು ಮತ್ತು ಹೆಚ್ಚು ಸಮಯ ಕೆಲಸ ಮಾಡಬೇಕಾಗಿಲ್ಲ ಎಂಬುದು ಅವರ ನಂಬಿಕೆ. 1871 ರಲ್ಲಿ ಫ್ರಾನ್ಸ್‌ನ ಕಾರ್ಮಿಕರು ಇಂಟರ್‌ನ್ಯಾಶನಲ್ ವರ್ಕಿಂಗ್‌ಮೆನ್ಸ್ ಅಸೋಸಿಯೇಷನ್‌ನ ಕೆಲಸದಿಂದ ಸ್ಫೂರ್ತಿ ಪಡೆದರು ಮತ್ತು ತಮ್ಮದೇ ಆದ ಕಾರ್ಮಿಕ ಚಳುವಳಿಯನ್ನು ಪ್ರಾರಂಭಿಸಿದರು. ಇದೇ ರೀತಿ ಪ್ರಪಂಚಾದಾದ್ಯಂತ ಕಾರ್ಮಿಕ ಸಂಘಟನೆಗಳ ಶಕ್ತಿ ವೃದ್ಧಿಯಾಗಿದ್ದರಿಂದ ಮಾಲೀಕರು ಮತ್ತು ಕಾರ್ಮಿಕರ ಮಧ್ಯ ಸಂಘರ್ಷ ಧೀರ್ಘ ಕಾಲದವರೆಗೆ ಹೋರಾಟದ ಜರುಗಿ ಅಂತಿಮವಾಗಿ, ಪ್ರಪಂಚದಾದ್ಯಂತ ಕಾರ್ಮಿಕ ಚಳುವಳಿಯು 8–ಗಂಟೆಗಳ ಕೆಲಸ, ವಾರದ ಒಂದು ದಿನ ರಜೆ ಸೇರಿದಂತೆ ಹಲವು ಸೌಲಭ್ಯಗಳು ಪಡೆಯುವಲ್ಲಿ ಯಶಸ್ವಿಯಾದವು. ಆದರು ಸಹ ಇಂದು ಸಹ ಜಗತ್ತಿನ ವಿವಿಧ ವಲಯಗಳಲ್ಲಿನ ಕಾರ್ಮಿಕರ ಬವಣೆ ತಪ್ಪಿದಲ್ಲ ಹಾಗೂ ತಮ್ಮ ಬೇಡಿಕೆಗಳನ್ನು ಈಡೆರಿಸಿಕೊಳ್ಳಲು ನಿರಂತರ ಹೋರಾಟ ಮಾಡುತ್ತಲೆ ಇದ್ದಾರೆ. ಅವರ ಬವಣೆ ನೀಗಿಸಲು ಹಾಗೂ ಉತ್ತಮ ಜೀವನ ರೂಪಿಸಿಕೊಳ್ಳಲು ಸಮಗ್ರ ಕಾರ್ಯನೀತಿಯು ಕಾರ್ಮಿಕ ದಿನಾಚರಣೆದಿಂದ ಜಾರಿಗೆಯಾಗಲಿ ಎಂದು ಎಲ್ಲರೂ ಹೃದಯಪೂರ್ಕ ಆಶಿಸೋಣ.

# ಮಾನಸಿಕ ಒತ್ತಡ ನಿರ್ವಹಣೆಯಲ್ಲಿ ಭಾವನಾತ್ಮಕ ಅಂಶದ ಪಾತ್ರ (Rool of Emotional quotient in stress management)

– ಶ್ರೀ ಧೀರೇಂದ್ರ ನಾಗರಹಳ್ಳಿ, ಬೆಂಗಳೂರು




ನಮಗೆಲ್ಲರಿಗೂ Intellgiene quotient (IQ) ಬಗ್ಗೆ ಮಾಹಿತಿ ಇದೆ. ಆದರೆ, ಏನಿದು Emotional quotient (ಇಕ್ಯು)?

"ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ಆ ಭಾವನೆಗಳನ್ನು ನಿರ್ವಹಿಸಿ ಅವುಗಳನ್ನು ಸಕಾರಾತ್ಮಕವಾಗಿ ದುಡಿಸಿಕೊಳ್ಳುತ್ತಲೆ ಮಾನಸಿಕ ಒತ್ತಡದಿಂದ ದೂರವಾಗುವ ಸಾಮರ್ಥವನ್ನೇ ನಾವು ಭಾವನಾತ್ಮ ಅಂಶ ಎನ್ನಬಹುದು".

'Emotional quotient' ಎನ್ನುವುದನ್ನು ಕನ್ನಡದಲ್ಲಿ ಭಾವನಾತ್ಮಕ ಅಂಶ ಎಂದು ಕರೆಯಬಹುದು ತುಂಬಾ ಸರಳವಾಗಿ ಹೇಳಬೇಕೆಂದರೆ ಕಾಲ–ಕಾಲಕ್ಕೆ ನಮಗೊದಗಿ ಬರುವ ದುಖಃ, ಸಂಕಟ, ವೇದನೆಗಳನ್ನು ನಿರ್ವಹಿಸುತ್ತಲೆ ಅವೆಲ್ಲವನ್ನೂ ಸಕರಾತ್ಮಕವಾಗಿ ದುಡಿಸಿಕೊಂಡು ಒತ್ತಡದಿಂದ ಮುಕ್ತವಾಗುವುದನ್ನೆ 'ಭವನಾತ್ಮಕ ಅಂಶ' ಎಂದು ಹೇಳಬಹುದು.ಭವನಾತ್ಮಕ ಅಂಶದ ಪರಿಕಲ್ಪನೆಯನ್ನು ಮೊಟ್ಟಮೊದಲ ಬಾರಿಗೆ ಹೇಳಿದ್ದು ಆಮೇರಿಕಾದ ಮನಃಶಾಸ್ತ್ರಜ್ಞ ಡ್ಯಾನಿಯಲ್ ಗೊಲ್ಮನ್. ಗೋಲ್ಮನ್ ಪ್ರಕಾರ ಈ ಭವನಾತ್ಮಕ ಅಂಶ ಎನ್ನುವುದನ್ನು ನಾವು ಹೇಗೆ ದುಡಿಸಿಕೊಳ್ಳೂತ್ತೇವೆ ಎನ್ನುವುದರ ಆಧಾರದ ಮೇಲೆ ಒಬ್ಬ ವ್ಯಕ್ತಿಯ ಶೇಕಡ 80 ರಷ್ಟು ಯಶಸ್ಸು ನಿರ್ಧಾರವಾಗಿರುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಗೋಲ್ಮನ್ ಹೇಳಿರುವದನ್ನು ಸುಲಭವಾಗಿ ವಿವರಿಸಿದರೆ – ಶಾಲೆಗಳಲ್ಲಿ / ಕಛೇರಿಗಳಲ್ಲಿ ಜರುಗುವ ಬೆದರಿಸುವ ಘಟನೆಗಳಾಗಿರಬಹುದು, ಅಥವಾ ಅಶಿಸ್ತಿನ ನಡವಳಿಕೆಗಳಾಗಿರಬಹುದು ಅಥವಾ ಇನ್ನಾವುದಾದರು ಮಾನಸಿಕ ಹಿಂಸೆಗೊಳಪಡಿಸುವ ಘಟನೆಗಳನ್ನು ಹೆಚ್ಚಿನ ಭವನಾತ್ಮಕ ಅಂಶಗಳಿಂದ ಕಡಿಮೆ ಮಾಡಬಹುದು ಮತ್ತು ಕ್ರಮೇಣವಾಗಿ ನಿಯಂತ್ರಿಸಬಹುದು. ಗೋಲ್ಮನ್ ಪ್ರತಿಪಾದಿಸಿದಂತೆ ಈ ಭವನಾತ್ಮಕ ಅಂಶಗಳು ಕೆಳಗೆ ಕೊಟ್ಟಿರುವ 5 ಮೂಲಧಾತುಗಳಿಂದ ಕೂಡಿರುತ್ತದೆ – ಸಹನಾಭೂತಿ(Empathy) , ಸಮಾಜಿಕ ಕೌಶಲ್ಯ (Social skills) , ಸ್ವಯಂ ತಿಳುವಳಿಕೆ (Self Awareness), ಸ್ವಯಂ ನಿಯಂತ್ರಣ(Self regulation) ಹಾಗೂ ಪ್ರೇರಣೆ (Motivation).

ಡ್ಯಾನಿಯಲ್ ಗೋಲ್ಮನ್ ಪ್ರಕಾರ Emotional quotient (ಇಕ್ಯು) ಎನ್ನುವುದು ಸ್ವಯಂ ದಕ್ಷತೆಯನ್ನು ಹೆಚ್ಚಿಸಲು ಮತ್ತು ಕೆಲಸದ ಪರಿಸರದಲ್ಲಿ ಸಹೋದ್ಯೋಗಿಗಳೊಂದಿಗೆ ಉತ್ತಮ ಬಾಂಧವ್ಯವನ್ನು ನಿರ್ಮಿಸಲು ವಿಷಯಾಧಾರಿತ ನೈಪುಣ್ಯತೆಗಿಂತಲೂ ಎರಡು ಪಟ್ಟು ಹೆಚ್ಚು ಕೆಲಸ ಮಾಡುತ್ತದೆ.ಮೇಲೆ ತಿಳಿಸಿದಂತೆ ಈ ಭವನಾತ್ಮಕ ಅಂಶವು(Emotional quotient) ಕೆಳಗೆ ಕೊಟ್ಟಿರುವ 5 ಮೂಲಧಾತುಗಳಿಂದ ಕೂಡಿರುತ್ತದೆ – ಸಹಾನಭೂತಿ (Empathy), ಸಮಾಜಿಕ ಕೌಶಲ್ಯ (Social skills) , ಸ್ವಯಂ ತಿಳುವಳಿಕೆ (Self Awareness) , ಸ್ವಯಂ ನಿಯಂತ್ರಣ(Self regulation) ಹಾಗೂ ಪ್ರೇರಣೆ (Motivation). ಈಗ ಒಂದೊಂದಾಗಿ ಇವೆಲ್ಲವುಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ.

**ಮೂಲಧಾತುಗಳು :–**

